# ಅಖಿಲ ಕರ್ನಾಟಕ
# ಶಿಕ್ಷಕ ಸಮಾಚಾರ

ಮೇ 2022 ಮಾಸ ಪತ್ರಿಕೆ

ಸಂಪುಟ/Volume : 44
ಸಂಚಿಕೆ/Issue : 8
ಪುಟ/Pages : 12
ಬೆಲೆ/Price : ₹ 10/–

## Akhila Karnataka Shikshaka Samachar | May 2022 | Monthly




A Journal of Karnataka Rajya Madhyamika Shikshaka Sangha (R.)

## ಸಂಪಾದಕೀಯ

# ಎಲ್ಲಾ ಶಿಕ್ಷಕ ಬಂಧುಗಳಿಗೂ ಶಾಲಾ ಶುಭಾರಂಭದ ಶುಭಾಶಯಗಳು.

ಪ್ರತಿ ಬಾರಿ ಶಾಲಾ ಆರಂಭೋತ್ಸವವೇ ಬೇರೆ ರೀತಿಯದ್ದಾಗಿರುತ್ತಿತ್ತು. ಈ ಬಾರಿ ಶಾಲಾ ಪ್ರಾರಂಭೋತ್ಸವವೇ ಬೇರೆ ರೀತಿಯದ್ದಾಗಿದೆ. ಅದರಲ್ಲಿ ಮೊದಲನೇಯದೆಂದರೆ ಶಾಲಾ ಆರಂಭ 15 ದಿನಗಳ ಮೊದಲೇ ಆಗಿದೆ. ಕೆಲವು ಶಿಕ್ಷಕರಿಗೆ ಖುಷಿಯಾಗಿರಬಹುದು. ಕೆಲವೊಬ್ಬರಿಗೆ ಬೇಸರವೂ ಆಗಿರಬಹುದು. ಶಿಕ್ಷಕರಿಗೆ ಸಿಗುವುದೇ ಕೆಲವೇ ದಿನಗಳ ರಜೆ. ಅದರಲ್ಲಿ ಎಸ್.ಎಸ್.ಎಲ್.ಸಿ ಪರೀಕ್ಷಾ ಪತ್ರಿಕೆಗಳ ಮೌಲ್ಯಮಾಪನ, ತರಬೇತಿ ಕಳೆದರೆ ಸಿಗುವ ಇಪ್ಪತ್ತು-ಇಪ್ಪತ್ತೈದು ದಿನಗಳಲ್ಲಿ ಹದಿನೈದು ದಿನ ಮೊದಲೇ ಶಾಲೆಗೆ ಬರಬೇಕೆಂದರೆ ಬೇಸರವಾಗುವುದು ಸಹಜ. ಅನೇಕ ಶಿಕ್ಷಕರು ವರ್ಷವಿಡೀ ಬೇಸರ ಪಡದೇ ಕೆಲಸ ಮಾಡಿ, ತಮ್ಮ ಸಂಬಂಧಿಕರನ್ನು ಭೇಟಿ ಮಾಡಲು, ತಮ್ಮ ಸ್ವಕ್ಷೇತ್ರಗಳಿಗೆ ತೆರಳ ತಮ್ಮ ವೈಯಕ್ತಿಕ ಕೆಲಸಗಳಿಗೆ ಗಮನ ನೀಡಲು ಬೇಸಿಗೆ ರಜೆಯನ್ನೇ ನಂಬಿರುತ್ತಾರೆ. ಆ ಬೇಸಿಗೆ ರಜೆಯೂ ಕಡಿತಗೊಂಡರೆ ಬೇಸರವಾಗದೇ ಇನ್ನೇನು. ಅನೇಕ ಶಿಕ್ಷಕರು ರಜಾ ರಹಿತ ಇಲಾಖೆಯನ್ನಾಗಿ ಮಾಡಿಬಿಡಿ ಎನ್ನುವ ಕೂಗನ್ನು ಎತ್ತಿದ್ದಾರೆ. ಈ ಬಾರಿ ಕಲಿಕಾ ಚೇತರಿಕೆ ಎಂಬ ಹೊಸ ಕಾರ್ಯಕ್ರಮವನ್ನು ಆಯೋಜಿಸಿ, ಶಿಕ್ಷಕರಿಗೂ ತರಬೇತಿ ನೀಡಿರುವುದು ಸ್ವಾಗತಾರ್ಹ. ಆದರೆ ಅಷ್ಟೇ ಕುತೂಹಲದಿಂದ ಕಾಯುತ್ತಿದ್ದ ಶಿಕ್ಷಕರಿಗೆ ಇನ್ನೂ ಕಲಿಕಾ ಚೇತರಿಕೆ ಹಾಳೆಗಳು, ಪುಸ್ತಕಗಳು ಸಿಗದಿರುವುದು ನಿರಾಸೆ ಉಂಟು ಮಾಡಿದೆ. ಕಲಿಕಾ ಚೇತರಿಕೆ ಕಾರ್ಯಕ್ರಮ ಮಾಡಲು ಹದಿನೈದು ದಿನಗಳ ಮುಂಚೆಯೇ ಶಿಕ್ಷಕರು ಶಾಲೆಗೆ ಹಾಜರಾಗಬೇಕೆಂದು ಹೇಳ ಆ ಕಾರ್ಯಕ್ರಮಕ್ಕೆ ಬೇಕಾದ ಮೂಲಸೌಲಭ್ಯವನ್ನು ನೀಡದಿರುವುದು ಶಿಕ್ಷಕರಿಗೆ ಕಷ್ಟವಾಗುತ್ತಿದೆ. ಎರಡು ವರ್ಷಗಳಲ್ಲಿ ವಿದ್ಯಾರ್ಥಿಗಳಿಗೆ ಆದ ನಷ್ಟವನ್ನು ಭರಿಸಲು ಶಾಲೆಯನ್ನು ಹದಿನೈದು ದಿನ ಮುಂಚಿತವಾಗಿ ಪ್ರಾರಂಭ ಮಾಡುತ್ತಿದ್ದೇವೆ ಎಂದು ಹೇಳ, ತರಬೇತಿಯನ್ನು ರಜೆಯಲ್ಲಿ ನೀಡಿ, ಶಾಲೆ ಪ್ರಾರಂಭವಾದ ವಾರವಾದರೂ ಬೇಕಾದ ಮೂಲ ಸೌಲಭ್ಯ ನೀಡದಿರುವುದು ಶಿಕ್ಷಕರ ಬೇಸರಕ್ಕೆ ಕಾರಣ. ಈ ಹದಿನೈದು ದಿನಗಳಲ್ಲಿ "ಮಳೆಬಿಲ್ಲು" ಎಂಬ ಕಾರ್ಯಕ್ರಮವನ್ನು ಮಾಡಿ ದಿನಕ್ಕೊಂದು ವಿಷಯ ನೀಡಿ ಮಕ್ಕಳ ಕಲಿಕೆಗೆ ಪೂರಕ ವಾತಾವರಣ ನಿರ್ಮಿಸಲು ಹೊರಟಿರುವುದು ಸ್ವಾಗತಾರ್ಹ. ಆದರೆ ಪ್ರಾಥಮಿಕ ಹಂತದಲ್ಲಿಯ ವಿದ್ಯಾರ್ಥಿಗಳಿಗೆ ಇಡೀ ದಿನ ಅಂದರೆ ಮೊದಲರ್ಧ ದಿನದಲ್ಲಿ ಏನು ಮಾಡಬೇಕೆಂದು ತೋರಿಸಿ, ಇನ್ನರ್ಧ ದಿನದಲ್ಲಿ ಮಕ್ಕಳಿಂದ ಮಾಡಿಸಿದರೆ ಆಗುತ್ತದೆ. ಆದರೆ ಪ್ರೌಢಶಾಲೆಯ ವಿದ್ಯಾರ್ಥಿಗಳಿಗೆ ಇಡೀ ದಿನ ಒಂದು ಶೀರ್ಷಿಕೆಯಡಿ ಮಾಡಿಸುವುದೇನು? ಇರಲಿ, ಇಷ್ಟೆಲ್ಲಾ ಪ್ರಶ್ನೆಗಳ ಮಧ್ಯದಲ್ಲಿ ಉತ್ತಮ ಶಿಕ್ಷಕನಾದವನಿಗೆ ಕಲಿಕೆಯಲ್ಲಿ ಮಕ್ಕಳನ್ನು ತೊಡಗಿಸುವುದು ಕಷ್ಟದ ಕೆಲಸವೇನಲ್ಲ. ಶಾಲೆಯ ಪ್ರಾರಂಭದಲ್ಲಿಯೇ ಬೇಸರದಿಂದ ಪ್ರವೇಶ ಮಾಡುವ ಬದಲು, ಇಲಾಖೆ ವಿದ್ಯಾರ್ಥಿಗಳ ಒಳತನ್ನೇ ಬಯಸಿ ಯಾವುದೇ ಕಾರ್ಯಕ್ರಮವನ್ನಾದರೂ ಮಾಡುವುದು. ಇಲಾಖೆ ಯೋಜನೆಗಳನ್ನು ಅಂತಿಮವಾಗಿ ಸಾಕಾರಗೊಳಸುವವರು ಶಿಕ್ಷಕರಾದ ನಾವೇ ಅಲ್ಲವೇ? ಇಲಾಖೆ ನೀಡಿರುವ ಸೂಚನೆಗಳ ಜೊತೆ ನಮ್ಮವೇ ಕೆಲವೊಂದು ಯೋಜನೆಗಳನ್ನು ಹಾಕಿಕೊಂಡು ಎರಡು ವರ್ಷದಲ್ಲಿ ವಿದ್ಯಾರ್ಥಿಗಳ ಕಲಿಕೆಯಲ್ಲಿ ಆಗಿರುವ ನಷ್ಟವನ್ನು "ಆಟದೊಂದಿಗೆ ಪಾಠ" ದೊಂದಿಗೆ ಭರಿಸಲು ನಾವೆಲ್ಲಾ ಶಿಕ್ಷಕರು ನಮ್ಮ ಶ್ರಮ ಹಾಕಿದರೆ, ಎಲ್ಲಾ ಶಿಕ್ಷಕರು ತಮ್ಮ ವೈಯಕ್ತಿಕ ಕೆಲಸಗಳನ್ನು ಬದಿಗೊತ್ತಿ, ಇಲಾಖೆಯ ಆದೇಶದಂತೆ ಹದಿನೈದು ಮೊದಲೇ ಬಂದಿರುವುದು ಸಾರ್ಥಕವಾಗುವುದಲ್ಲವೇ? ನಮ್ಮ ವಿದ್ಯಾರ್ಥಿಗಳನ್ನು ಇಡೀ ಶೈಕ್ಷಣಿಕ ವರ್ಷದ ಕಲಿಕೆಗೆ ಸಜ್ಜುಗೊಳಸಲು ಹದಿನೈದು ದಿನಗಳ ಬೋನಸ್ ಅವಧಿ ದೊರಕಿದೆಯೆಂದು ಅದರ ಸದುಪಯೋಗ ಮಾಡಿಕೊಳ್ಳುವುದೇ ಜಾಣ ಶಿಕ್ಷಕರ ಲಕ್ಷಣ.


ಎಲ್ಲರಿಗೂ ಮತ್ತೊಮ್ಮೆ ಶುಭಾಶಯವನ್ನು ತಿಳಸುತ್ತಿದ್ದೇನೆ. ಎಲ್ಲರೂ ಸೇವಾ ಮನೋಭಾವದಿಂದ ನಮ್ಮ ರಾಷ್ಟ್ರದ ಭವಿಷ್ಯವನ್ನು ಸೃಜಿಸುವ ಕೆಲಸವನ್ನು ಮಾಡೋಣವೇ?

– – – – –

ಇದೇ ಆಗಸ್ಟ್ 15ಕ್ಕೆ ನಮ್ಮ ದೇಶ ಸ್ವಾತಂತ್ರ್ಯವನ್ನು ಗಳಿಸಿ 75 ವರ್ಷಗಳಾಗುತ್ತಾ ಬಂತು. ಈ ಸಂಭ್ರಮದ ಅಮೃತ ಮಹೋತ್ಸವವನ್ನು ಶಿಕ್ಷಕ ಸಂಘದ ವತಿಯಿಂದ ಅತ್ಯಂತ ವಿಜ್ರಂಭಣೆಯಿಂದ ಆಚರಿಸಲು ನಿರ್ಧರಿಸಲಾಗಿದೆ. ಇದೇ ಆಗಸ್ಟ್ 1 ರಂದು ಶಿಕ್ಷಕ ಸಂಘದಿಂದ ನಡೆಸಬೇಕೆಂದಿರುವ "ಸ್ವಾತಂತ್ರ್ಯ ಅಮೃತಮಹೋತ್ಸವ"ದ ತಯಾರಿಯನ್ನು ತಾವೆಲ್ಲಾ ತ್ವರಿತವಾಗಿ ಮಾಡಿಕೊಳ್ಳಬೇಕಾಗಿ ಕ.ರಾ.ಮಾ.ಶಿ.ಸಂಘದ ಅಧ್ಯಕ್ಷರಾದ ಶ್ರೀ ಸಂದೀಪ್ ಬೂದಿಹಾಳ್ ರವರು ಮತ್ತು ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಚಿದಾನಂದ ಪಾಟೀಲ್‌ರವರು ತಿಳಿಸಿರುತ್ತಾರೆ.

ಸಂಪಾದಕ

## ಸೂಕ್ತಿ



ಏಕಮಪ್ಯಕ್ಷರಂ ಯಸ್ತು ಗುರು: ಶಿಷ್ಯೇ ಪ್ರಬೋಧಯೇತ್ ।
ಪೃಥಿವ್ಯಾಂ ನಾಸ್ತಿ ತದ್ದ್ರವ್ಯಂ
ಯದ್ದತ್ತ್ವಾಸೋ ನೃಣೀ ಭವೇತ್ ॥

ಯಾರು ಕೇವಲ ಒಂದೇ ಒಂದು ಅಕ್ಷರವನ್ನು ಕಲಿಸಿರುತ್ತಾರೋ ಅವರನ್ನು ಗುರುವೆಂದೇ ಭಾವಿಸಬೇಕು. ಈ ಭೂಮಿಯಲ್ಲಿ ವಿದ್ಯೆಯಂಥ ಸಂಪತ್ತು ಬೇರಾವುದೂ ಇಲ್ಲ. ಇಂಥ ಸಂಪತ್ತನ್ನು ಧಾರೆಯೆರೆದ ಗುರುವಿಗೆ ನಾವು ಸದಾ ಋಣಿಗಳಾಗಿರಬೇಕು. ವಿದ್ಯೆ ಎಂದರೆ ಕೇವಲ ಅಕ್ಷರಾಭ್ಯಾಸವಷ್ಟೇ ಅಲ್ಲ. ಒಳ್ಳೆಯ ಉಪದೇಶ, ಮಾತು, ಅನುಭವ, ಮಾರ್ಗದರ್ಶನಗಳು ಕೂಡ ವಿದ್ಯೆಯೇ ಆಗಿರುತ್ತದೆ".

- ಚಾಣಕ್ಯನೀತಿ

## ಪರಿವಿಡಿ


- ವಿದ್ಯಾರ್ಥಿಯ ಭವಿಷ್ಯ ಬುನಾದಿಯಲ್ಲಿ ಶಿಕ್ಷಕನ ಪಾತ್ರ — 3
- ಭಾಷಣ ಕಲೆ — 4
- ಶಾಲೆ ಬಿಟ್ಟ ಮಕ್ಕಳನ್ನು ಮರಳಿಗೆ ಶಾಲೆಗೆ ತರುವಲ್ಲಿ ; ಎನ್‌ಇಪಿ-2020 ಯಲ್ಲಿಯ ಚಿಂತನೆ — 7
- ಸ್ವಾತಂತ್ರ್ಯ ಹೋರಾಟ ಹಿನ್ನೋಟ, ಮುನ್ನೋಟ — 8
- ವಿದ್ಯಾರ್ಥಿ ಮಿತ್ರ — 10
- ಯಶಸ್ಸಿನ ಮೂಲ ಮಂತ್ರ — 11
- ಶಿಕ್ಷಣ ಸಂಕುಲ — 12

# ವಿದ್ಯಾರ್ಥಿಯ ಭವಿಷ್ಯ ಬುನಾದಿಯಲ್ಲಿ ಶಿಕ್ಷಕನ ಪಾತ್ರ

**ಶ್ರೀಮತಿ ವಿಜಯಲಕ್ಷ್ಮಿ ನಾಯಕ್**
ಸಹ ಶಿಕ್ಷಕಿ, ಸರ್ಕಾರಿ ಪ್ರೌಢಶಾಲೆ, ದೊಡ್ಡಾಲಹಳ್ಳಿ, ಕನಕಪುರ ತಾ॥ ಮತ್ತು ಕಾರ್ಯದರ್ಶಿಗಳು, ಕ.ರಾ.ಮಾ.ಶಿ.ಸಂಘ



ಕೋವಿಡ್–19 ಈ ಮಹಾಮಾರಿಯು ಪ್ರಪಂಚದ ಎಲ್ಲಾ ದೇಶಗಳನ್ನು ಆರ್ಥಿಕವಾಗಿ, ಸಾಮಾಜಿಕವಾಗಿ ಹಾಗೂ ಪ್ರಮುಖವಾಗಿ ಶೈಕ್ಷಣಿಕ ಕ್ಷೇತ್ರವನ್ನು ಹಿಡಿದು ನಿಲ್ಲಿಸಿರುವ ಮೂರು ವರ್ಷಗಳ ಕಾಲ ಮೇಲ್ಕಂಡ ಎಲ್ಲಾ ರೀತಿಯ ಪ್ರಗತಿಯನ್ನು ತಡೆ ಹಿಡಿದಿದೆ.

ಈ ದಿಶೆಯಲ್ಲಿ ಶೈಕ್ಷಣಿಕ ಕ್ಷೇತ್ರದಲ್ಲಿ ಉಂಟಾಗಿರುವ ಹಿನ್ನಡೆಯನ್ನು ಸರಿದೂಗಿಸಿ ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ಶಿಕ್ಷಕರು ವಿದ್ಯಾರ್ಥಿಗಳ ಪ್ರಗತಿಗೆ ಬೇರೆಯದೆ ರೀತಿಯಲ್ಲಿ ಯೋಜನೆಗಳನ್ನು, ಯೋಚನೆಗಳನ್ನು ಮಾಡಿಕೊಳ್ಳುವುದು ಅಗತ್ಯವಾಗಿದೆ. ಏಕೆಂದರೆ ಕಳೆದ ಮೂರು ವರ್ಷಗಳಲ್ಲಿ ವಿದ್ಯಾರ್ಥಿಯು ನೇರವಾಗಿ ಶಾಲೆಗೆ ಆಗಮಿಸದೆ ಆನ್‌ಲೈನ್ ಮೂಲಕ ಪಾಠ ಪ್ರವಚನಗಳನ್ನು ಆಲಿಸುತ್ತಾ ಬಂದಿರುವುದರಿಂದ ಕಲಿಕೆ 100% ಆಗಿರಲು ಸಾಧ್ಯವಿಲ್ಲ.

ಆದುದರಿಂದ ಒಂದು ರೀತಿಯಲ್ಲಿ ಹೇಳಬೇಕೆಂದರೆ ವಿದ್ಯಾರ್ಥಿಗಳಿಗೆ ಕಳೆದ ಹಿಂದಿನ ಮೂರು ವರ್ಷಗಳ ಪಾಠ ಪ್ರವಚನಗಳನ್ನು ಮನವರಿಕೆ ಮಾಡಿಕೊಡಬೇಕಾದಂತಹ ಗುರುತರವಾದ ಜವಾಬ್ದಾರಿಯು ಶಿಕ್ಷಕರ ಹೆಗಲಮೇಲಿದೆ.

ಈ ದಿಶೆಯಲ್ಲಿ ಯೋಚಿಸಿ ಸರ್ಕಾರವು "ಕಲಿಕಾ ಚೇತರಿಕೆ" ಎಂಬ ಕಾರ್ಯಕ್ರಮವನ್ನು ಜಾರಿಗೆ ತಂದು ಶಾಲೆಗಳನ್ನು 15 ದಿನಗಳು ಮುಂಚಿತವಾಗಿ ಪ್ರಾರಂಭಿಸುತ್ತಿರುವುದು. ಶಿಕ್ಷಣ ಕ್ಷೇತ್ರದ ಬಗ್ಗೆ ಸರ್ಕಾರಕ್ಕಿರುವಂತಹ ಕಾಳಜಿಯನ್ನು ತೋರಿಸುತ್ತದೆ. ಈ ಯೋಜನೆ ಶಿಕ್ಷಕರಿಗೆ ಸ್ವಲ್ಪ ಮಟ್ಟಿನ ತೊಡಕಾದರು ಮಕ್ಕಳ ಹಿತದೃಷ್ಟಿಯಿಂದ ಅಭಿನಂದನಾರ್ಹ.

## ಶಿಕ್ಷಕನ ವೃತ್ತಿ ಬರಿ ವೃತ್ತಿ ಮಾತ್ರ ಅಲ್ಲ ಅದು ಜೀವನದ ಪರಿವರ್ತನೆಯ ಹಾದಿ

ಮೊದಲಿಗೆ ಶಿಕ್ಷಕನು ವಿದ್ಯಾರ್ಥಿಗಳನ್ನು ತಮ್ಮ ಮಕ್ಕಳಂತೆ ಪ್ರೀತಿ ಮಾಡಬೇಕು. ಇಲ್ಲ ಎಂದರೆ ಆತ ಶಿಕ್ಷಕನಾಗಬಾರದು. ವಿದ್ಯಾರ್ಥಿಗೆ ವಿಷಯದಲ್ಲಿ ಆಸಕ್ತಿ ಮೂಡಬೇಕಾದರೆ ಶಿಕ್ಷಕನಲ್ಲಿ ಆಸಕ್ತಿ ಬಂದರೆ ನಂತರ ಶಿಕ್ಷಕನು ಬೋಧಿಸುವ ವಿಷಯದಲ್ಲಿ ಆಸೆ, ಆಸಕ್ತಿ ಮೂಡುತ್ತದೆ.

ಶಿಕ್ಷಕನು ವಿದ್ಯಾರ್ಥಿಗಳಿಗೆ ಏನೇ ಕಲಿಸಬೇಕು ಎಂದು ಆಸೆ ಇಟ್ಟುಕೊಂಡರು, ಮೊದಲನೆದಾಗಿ ಮಕ್ಕಳಲ್ಲಿ ಶ್ರದ್ಧೆಯನ್ನು ಸೃಷ್ಟಿ ಮಾಡಬೇಕು, ಒಳ್ಳೆಯದ್ದನ್ನು ಗುರುತಿಸಿ ಹೇಳಬೇಕು. ಆಶಕ್ತತೆಯನ್ನು, ಸಶಕ್ತತೆಯ ಕಡೆಗೆ ಬೆಳೆಸುವಂತಹ ಪ್ರಯತ್ನ ಶಿಕ್ಷಕನ ಗುರಿಯಾಗಬೇಕು.

ಅಷ್ಟೆ ಅಲ್ಲದೆ ನಮ್ಮ ಪರಂಪರೆಯ ಬಗ್ಗೆ ಆತ್ಮ ವಿಶ್ವಾಸ ಮೂಡಿಸಬೇಕು. ದೇಶದ ಬಗ್ಗೆ ಪ್ರೀತಿ ಮೂಡಿಸಬೇಕು. ಈ ನಿಟ್ಟಿನಲ್ಲಿ ವಿದ್ಯಾರ್ಥಿಯ ಕಲಿಕೆಗೆ ಮುನ್ನುಡಿ ಬರೆಯಬೇಕು. ಶಿಕ್ಷಕನಾದವನು ಎಷ್ಟೆ ವಿದ್ವತ್ತನ್ನು ಹೊಂದಿದ್ದರು ಸಹ ಸಹೃದಯಿಯಾಗಿರಬೇಕು, ಒಳ್ಳೆಯ ಭಾಷಾ ಕೌಶಲ್ಯ ಹೊಂದಿರಬೇಕು, ವಿದ್ಯಾರ್ಥಿಗಳಿಗೆ ಕಲಿಸಲು ಉತ್ಸುಕನಾಗಬೇಕು, ಸೌಹಾರ್ದಯುತನಾಗಿದ್ದು, ಭಾವಾನಾತ್ಮಕನಾಗಿರಬೇಕು, ಸೃಜನಶೀಲನಾಗಿದ್ದು ವಿದ್ಯಾರ್ಥಿಗಳನ್ನು ಸೃಜನಾತ್ಮಕವಾಗಿ ವಿಷಯದಲ್ಲಿ ಆಸಕ್ತಿ ಮೂಡಿಸಿದಾಗ ವಿದ್ಯಾರ್ಥಿಗಳು ಶಾಲೆಗೆ ಆಸೆಯಿಂದ ಬರುವುದಕ್ಕೆ ಸಾಧ್ಯ.

ಇಷ್ಟೆಲ್ಲಾ ಗುಣಗಳನ್ನು ಹೊಂದಿರುವ ಒಬ್ಬ ಶಿಕ್ಷಕನು ಶಾಲೆಯ ಪ್ರಾರಂಭದ ದಿನ ಬೇಸಿಗೆ ರಜೆಯನ್ನು ಮುಗಿಸಿ ಶಾಲೆಗೆ ತೆರಳಿದಾಗ ಅಲ್ಲಿನ ವ್ಯವಸ್ಥೆಗಳಿಗೆ ಅನುಗುಣವಾಗಿ ವಿದ್ಯಾರ್ಥಿಯ ಕಲಿಕೆಗೆ ಬೇಕಾದ ಸಿದ್ಧತೆಯನ್ನು ಮಾಡಿಕೊಳ್ಳಬೇಕು.

ವಿದ್ಯಾರ್ಥಿಗಳ ಕಲಿಕಾಮಟ್ಟ ಯಾವುದೇ ಹಂತದಲ್ಲಿರಲಿ ಅದನ್ನು ಗುರುತಿಸಿ, ಆತನಲ್ಲಿ ಉತ್ಸಾಹ ತುಂಬಿ ಆತನನ್ನು ಹೆಚ್ಚೆಚ್ಚು ಕಲಿಯುವಂತೆ ಆಸಕ್ತಿ ಮತ್ತು ಶ್ರದ್ಧೆಯನ್ನು ಆತನಲ್ಲಿ ಸೃಷ್ಟಿ ಮಾಡುವ ಶಕ್ತಿ ಸಾಮರ್ಥ್ಯ ಉತ್ತಮ ಶಿಕ್ಷಕನಲ್ಲಿರುತ್ತದೆ. ಹೀಗೆ ಶಿಕ್ಷಕನು ವಿದ್ಯಾರ್ಥಿಗಳಿಗೆ ಉತ್ತಮ ವಾತಾವರಣವನ್ನು ಸೃಷ್ಟಿ ಮಾಡಿ ಅವರ ಭವಿಷ್ಯಕ್ಕೆ ಮುನ್ನುಡಿ ಬರೆಯುವ ಪ್ರಯತ್ನದಲ್ಲಿ ಶಾಲೆಯ ಮೊದಲ ದಿನ ಮೊದಲ ಹೆಜ್ಜೆ ಇಡಬೇಕು.

"Imagination is more important than the knowledge"- Albert Einstein ಈ ಮಹಾನ್ ವ್ಯಕ್ತಿಯು ಹೇಳಿದಂತೆ ಒಬ್ಬ ಶಿಕ್ಷಕನು ಮನಸ್ಸು ಮಾಡಿದರೆ ವಿದ್ಯಾರ್ಥಿಯನ್ನು ಒಬ್ಬ ಶ್ರೇಷ್ಠ ನಾಗರಿಕನನ್ನಾಗಿ ಮಾಡುವಂತೆ ಅವರ ಮನಸ್ಸನ್ನು ಪರಿವರ್ತಿಸುವ ಹಾದಿಯಲ್ಲಿ ಶಿಕ್ಷಕನಿರುತ್ತಾನೆ.

ಶಿಕ್ಷಕ, ಶಿಕ್ಷಣದ ಮುಖ್ಯ ಕೆಲಸವೆಂದರೆ ವಿದ್ಯಾರ್ಥಿ ಬದುಕನ್ನು ಅರ್ಥಪೂರ್ಣವಾಗುವಂತೆ ಸಹಕರಿಸುವುದು.

ಹೀಗೆ ಶಿಕ್ಷಕರು ವಿದ್ಯಾರ್ಥಿಗಳಿಗಾಗಿ ಹೆಚ್ಚಿನ ಕನಸನ್ನು ಹೊತ್ತು ಶಾಲೆಗೆ ಮೊದಲ ದಿನ ಹೆಜ್ಜೆ ಇರಿಸಿದಾಗ ಅದು ಕೇವಲ ಕನಸಾಗಿ ಉಳಿಯದೆ ವಿದ್ಯಾರ್ಥಿಗಳಿಗೆ ಉಜ್ವಲ ಭವಿಷ್ಯಕ್ಕೆ ದಾರಿದೀಪವಾಗುತ್ತದೆ. ಹೀಗಿದ್ದರೆ ಶಾಲೆಯಲ್ಲಿ ಪ್ರತಿದಿನವು ಹಬ್ಬವೇ ಸರಿ.

●

# ಭಾಷಣ ಕಲೆ

**ಹೆಚ್. ನಾಗಭೂಷಣ್ ರಾವ್**
**ಪೋಷಕರು**
**ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ**



ಭಾಷಣ ಒಂದು ಧ್ವನಿ ಮಾಧ್ಯಮ. ನಮ್ಮ ಭಾವನೆಗಳನ್ನು ಅಭಿವ್ಯಕ್ತಗೊಳಿಸುವ ಒಂದು ಸಮರ್ಥ, ಶಕ್ತಿಯುತ ಮಾಧ್ಯಮ. ಬರಹದಲ್ಲಿ ಬರೆದದ್ದನ್ನು ತಿದ್ದಿಕೊಳ್ಳುವ, ಮತ್ತೆ ಮತ್ತೆ ಸರಿಪಡಿಸುವ ಸಾಧ್ಯತೆಯಿರುತ್ತದೆ. ಆದರೆ ಭಾಷಣಕಾರನ ಬಾಯಿಂದ ಹೊರಬಿದ್ದ ಮಾತು ಕೇಳುಗರ ಕಿವಿ ತಲುಪುವ ಬಾಣ. ಅದನ್ನು ಹಿಂದಕ್ಕೆ ಸೆಳೆಯುವ ತಿದ್ದಿಕೊಳ್ಳುವ ಸಾಧ್ಯತೆ ಇಲ್ಲವೇ ಇಲ್ಲ. ಆದ್ದರಿಂದ ನಮ್ಮ ಧ್ವನಿಗೆ ರೆಕ್ಕೆ ನೀಡುವ ಮುನ್ನ ಬಹಳ ತಯಾರಿ ನಡೆಸಬೇಕು. ಮಾತು ಮಾತಾಗಿರದೆ ಚಿಂತನೆಯ ಮಹಾಪೂರವನ್ನೇ ಹರಿಸಬೇಕು. ವಿಷಯದ ಸಮಗ್ರ ಪರಿಚಯ, ಪದಗಳು ತುಂಬಿದ ಮನದ ಬತ್ತಳಿಕೆ, ಭಾವಪೂರ್ಣ ಕಂಠ, ಸ್ಪಷ್ಟ ಉಚ್ಚಾರ, ಗಂಭೀರ ನಿಲುವು, ಸೂಕ್ತವಾದ ಅಂಗನ್ಯಾಸ, ಕರನ್ಯಾಸಗಳು ಭಾಷಣಕಾರನಿಗೆ ಇರಬೇಕಾದ ಲಕ್ಷಣಗಳು.

ನಾನು ಭಾಷಣಕಾರನಾಗಬೇಕು ಎಂಬ ಅಭೀಷ್ಟ ಮೊದಲಿಗೆ ಇರಬೇಕು. ಜೊತೆಗೆ ಉತ್ತಮ ಭಾಷಣಕಾರನಾಗಬಲ್ಲೆ ಎಂಬ ಆತ್ಮವಿಶ್ವಾಸವೂ ಇರಬೇಕು. ಈ ಎರಡಕ್ಕಿಂತ ಮುಖ್ಯವಾಗಿ ಭಾಷಣಕಾರನಾಗಲು ಸತತ ಪ್ರಯತ್ನ ನಡೆಸುತ್ತೇನೆ, ಅದಕ್ಕಾಗಿ ಯಾವ ಬೆಲೆಯನ್ನಾದರೂ ತೆರಲು ನಾನು ಸಿದ್ಧ ಎಂಬ ದೃಢ ಮನೋಭಾವಬೇಕು. ಎಲ್ಲ ಕಲೆಯಂತೆ ಭಾಷಣ ಕಲೆ ಕರಗತವಾಗಬೇಕಾದರೆ ನಿರಂತರ ಪ್ರಯತ್ನ, ಸತತ ಅಭ್ಯಾಸ ಅವಶ್ಯಕ. ಅದು ಒಮ್ಮೆ ಸಿದ್ಧಿಸಿದರೆ ಜೀವನವಿಡೀ ನಿಮ್ಮೊಂದಿಗೆ ಉಳಿಯುವ ಮಿತ್ರನಂತೆ. ಸಾಕು ಸಾಕೆನಿಸುವಷ್ಟು ಕರೆಕರೆಗಳು ನಿಮ್ಮದಾಗಬೇಕಾದರೆ ಇಗೋ, ಈ ಕೆಳಗಿನ ಅಂಶಗಳನ್ನು ಅಭ್ಯಸಿಸಿ ಉತ್ತಮ ಭಾಷಣಕಾರರಾಗಿ!

**ವಿಷಯ :** ವೇದಿಕೆಯಲ್ಲಿ ನಿಂತು ಗೊತ್ತು ಗುರಿಯಿಲ್ಲದೆ ಮಾತನಾಡುವವರನ್ನು ನೀವು ಗಮನಿಸಿರಬಹುದು. ಕೆಲವೊಮ್ಮೆ ವಿಷಯವನ್ನು ತಿಳಿಸಿದ್ದರೂ, ಕರಪತ್ರದಲ್ಲಿ ಮುದ್ರಿಸಿದ್ದರೂ ಅದು ಭಾಷಣಕಾರರನ್ನು ತಲಪಲಿಲ್ಲವೋ ಎಂಬ ಸಂದೇಹ ಮೂಡುವಷ್ಟರ ಮಟ್ಟಿಗೆ ವಿಷಯಾಂತರ ಆಗುತ್ತದೆ. ಮುಂದೊಂದು ದಿನ ನಿಮ್ಮನ್ನು ಸಭಾಸದರು ಬೇಸರದಿಂದಲೋ, ದಯೆಯಿಂದಲೋ ಸ್ವೀಕರಿಸಬಾರದೆಂದು ನಿರ್ಧರಿಸಿ, ಭಾಷಣದ ವಿಷಯವನ್ನು ಮೊದಲಿಗೆ ಸ್ಪಷ್ಟಪಡಿಸಿಕೊಳ್ಳಿ. ಸಂಯೋಜಕರು ವಿಷಯ ಕೊಡುತ್ತಿರುವಾಗಲೇ ಅವರು ನಿಮ್ಮಿಂದ ಯಾವ ಬಗೆಯ ನಿರೂಪಣೆ ಬಯಸುತ್ತಾರೆಂದು ಸೂಕ್ಷ್ಮವಾಗಿ ತಿಳಿದುಕೊಳ್ಳಿ. ಸಂಘ–ಸಂಸ್ಥೆಗಳು ಸಮಾನ ಮನೋಭಾವದವರ ಒಕ್ಕೂಟವಾದದ್ದರಿಂದ ಆಯಾ ಸಂದರ್ಭ, ಸಭಾಸದರಿಗೆ ರುಚಿಸುವಂತೆ ಮಾತನಾಡುವುದು ಭಾಷಣಕಾರನ ಯಶಸ್ಸಿನ ಗುಟ್ಟು. ಹಾಗೆಂದ ಮಾತ್ರಕ್ಕೆ ನಿಮ್ಮ ಸ್ವಂತಿಕೆಯನ್ನು ಮರೆಯಬೇಕಾಗಿಲ್ಲ. ಆದರೆ ಹೇಳುವುದನ್ನು ಮನಮುಟ್ಟುವಂತೆ ಹೇಳಬೇಕೆಂದಾದರೆ ಶ್ರೋತೃಗಳ ಮನ ಮಂದಿರದ ಕೀಲಿಕೈಯನ್ನು ಆಯೋಜಕರಿಂದ ಮೊದಲೇ ಪಡೆದುಕೊಂಡಿರಬೇಕು!

**ಉತ್ತಮ ಭಾಷಣಕಾರರಾಗುವುದರ ಮೂಲಕ ವ್ಯಕ್ತಿತ್ವ ವಿಕಾಸಗೊಳ್ಳುತ್ತದೆ. ಭಾಷಣವನ್ನು ಒಂದು ಯಜ್ಞದಂತೆ ಭಾವಿಸಬೇಕು. ಮಾತಿನ ಹವಿಸ್ಸು ಮಹೋದ್ದೇಶಕ್ಕೆ ಸಲ್ಲಬೇಕು. ನಿಮ್ಮ ಧ್ವನಿ ಕೇಳುವ ಕಿವಿಗಳನ್ನು ಧ್ವನಿಯಾಚೆಗೆ ಒಯ್ಯಬೇಕು. ನಿಮ್ಮ ಮನದ ಚಂದನ ಮಾತಿನ ಕಂಪಾಗಿ ಹರಡಬೇಕು. ನಿಮ್ಮ ಭಾವಬಿಂದು ಶ್ರೋತೃ ಸಮುದಾಯವನ್ನು ಚಿಂತನ ಸಿಂಧುವಿನಲ್ಲಿ ಮುಳುಗಿಸಬೇಕು. ಆಗ ನಿಮ್ಮದು ಯಶಸ್ವೀ ಭಾಷಣ. ನೀವೊಬ್ಬರು ಯಶಸ್ವೀ ಭಾಷಣಕಾರರು.**

ವಿಷಯವನ್ನು ಸ್ಪಷ್ಟವಾಗಿ ಅರ್ಥಮಾಡಿಕೊಂಡ ಮೇಲೆ ಅದರ ಹಿನ್ನೆಲೆ ಮುನ್ನೆಲೆಗಳನ್ನು ಅರಿಯುವ ಪ್ರಯತ್ನ ಮಾಡಬೇಕು. ಅದೇ ವಿಷಯವನ್ನು ಕುರಿತಂತೆ ಹಿಂದಿನ ತಲೆಮಾರಿನವರು, ಮಹನೀಯರು ಹೊಂದಿದ ಅಭಿಪ್ರಾಯಗಳನ್ನು ಸಂಗ್ರಹಿಸಬೇಕು. ಪ್ರಸ್ತುತ ಜನ–ಮನದಲ್ಲಿ ಆ ವಿಷಯದ ಕುರಿತು ಇರುವ ಪರ–ವಿರೋಧದ ಅಂಶಗಳನ್ನು ಗುರುತಿಸಬೇಕು. ಮುಂದೆ ಈ ವಿಷಯ ಬೀರುವ ಪರಿಣಾಮ, ಅದರ ಪ್ರಾಯೋಗಿಕ ಅಂಶಗಳನ್ನು ಪಟ್ಟಿ ಮಾಡಬೇಕು. ವಿಷಯ ಮಂಡನೆಗೆ ಪೂರಕವಾದ ಚಾಟೂಕ್ತಿ, ಶ್ಲೋಕ ಇತರ ಭಾಷೆಗಳಲ್ಲಿರುವ ಸಂಗ್ರಹೋಕ್ತಿಗಳನ್ನು ಪ್ರತ್ಯೇಕವಾಗಿ ಬರೆದಿಟ್ಟುಕೊಳ್ಳಬೇಕು. ಇವೆಲ್ಲ ಸಾಮಗ್ರಿಯನ್ನು ಬಳಸಿ ಒಂದು ಭಾಷಣವನ್ನು ರಚಿಸಬೇಕು. ಒಮ್ಮೆ ಅದನ್ನು ಓದಿ, ಸಂಯೋಜಕರ ನೀಡಿರುವ ವೇಳಾವಕಾಶಕ್ಕೆ ಅದು ಸರಿಹೊಂದುತ್ತದೊ ಎಂದು ಗಮನಿಸಬೇಕು. ಚಿಕ್ಕದಾಗಿಬಿಟ್ಟರೆ, ಭಾಷಣ ಅಳ್ಳಕವಾಗದಂತೆ ಅಲ್ಲಲ್ಲಿ ಪುಷ್ಟಿ ನೀಡಿ ಅದನ್ನು ವಿಸ್ತರಿಸಬೇಕು; ದೊಡ್ಡದಾಗಿ ಬಿಟ್ಟರೆ ಅದು ವಿಕಲಾವತಾರ ತಳೆಯದಂತೆ ಅಲ್ಲಲ್ಲಿ ಮೊಟಕುಗೊಳಿಸಿ ಸಂಕ್ಷೇಪಗೊಳಿಸುವುದು ಉಚಿತ. ಭಾಷಣದ ಅವಧಿಗೆ ಸರಿಯಾಗಿ ಭಾಷಣವನ್ನು ರೂಪಿಸಿಕೊಂಡರೆ ಸಂಯೋಜಕರಿಗೂ, ಸಭಾಸದರಿಗೂ ಬಹಳವೇ

**ಪುಟ 5 ಕ್ಕೆ ➤**

**ನಾನು ಎಂಬುದು ಕರಗಬೇಕು – ಕವೀಂದ್ರ ರವೀಂದ್ರರು**

➢ ಪುಟ 4 ರಿಂದ.....

ಸಂತೋಷವಾಗುತ್ತದೆ. 'ಇನ್ನೂ ಇರಬೇಕಿತ್ತು, ನಿಮ್ಮ ಮಾತು ಬಹಳ ಚೆನ್ನಾಗಿತ್ತು' ಎಂಬ ಸರ್ಟಿಫಿಕೇಟು ದೊರೆತಾಗ ನೀವು ಉತ್ತಮ ಭಾಷಣಕಾರರು!

ಭಾಷಣ ಬರೆದಿಟ್ಟುಕೊಂಡ ಬಳಿಕ ಅದನ್ನು ಸ್ವಗತ ಮೂರು ಬಾರಿ ಮತ್ತು ಗಟ್ಟಿಯಾಗಿ ಮೂರು ಬಾರಿ ಓದಿಕೊಳ್ಳಿ. ಉಚ್ಚಾರಣೆಗೆ ಕಷ್ಟವೆನಿಸುವ ಪದಗಳನ್ನು ನಿರ್ದಾಕ್ಷಿಣ್ಯವಾಗಿ ತೆಗೆದು ಅದರ ಸ್ಥಾನದಲ್ಲಿ ಸಂವಾದಿಯಾದ ಸಮಾನಾರ್ಥವುಳ್ಳ ಪದವನ್ನು ಸೇರಿಸಿ. ಕಷ್ಟವಾದರೂ ಪರವಾಗಿಲ್ಲ ತೂಕದ ಪದವಿರಲಿ ಎಂದು ಅವುಗಳನ್ನು ಉಳಿಸಿಕೊಂಡರೆ ಆ ಭಾರದಿಂದ ನೀವೂ ನಿಮ್ಮ ಭಾಷಣವೂ ಸಭಾಸದರ ನಗೆಗಡಲಲ್ಲಿ ಮುಳುಗಿಹೋಗುವ ಅಪಾಯವಿದೆ! ಭಾಷಣವನ್ನು ಗಟ್ಟಿಯಾಗಿ ಓದುವ ಅಭ್ಯಾಸವಾದ ಬಳಿಕ ನಿಲುವುಗನ್ನಡಿಯ ಮುಂದೆ ನಿಂತು ವಿಷಯ ನಿರೂಪಣೆಗೆ ಸೂಕ್ತವಾದ ರೀತಿಯಲ್ಲಿ ಕರನ್ಯಾಸ ನಡೆಸುತ್ತಾ ಧ್ವನಿಯನ್ನು ಏರಿಳಿಸುತ್ತಾ ಭಾಷಣವನ್ನು ಅಭ್ಯಾಸ ಮಾಡಬೇಕು. ಭಾಷಣದ ಪೂರ್ಣ ಕರಡು ಸಿದ್ಧವಿದ್ದರೂ ಅದನ್ನು ಹಾಗೆಯೇ ವೇದಿಕೆಗೆ ಒಯ್ಯಬಾರದು. ಭಾಷಣ ನಿಗದಿತವಾಗಿರುವ ದಿನಾಂಕಕ್ಕೆ ಎರಡು ದಿನ ಮುಂಚಿತವಾಗಿಯೇ 4 ಅಂಗುಲ ಉದ್ದ-ಅಗಲವಿರುವ ಚೌಕಾಕಾರದ ದಪ್ಪ ಹಾಳೆಯ ಮೇಲೆ ಮುಖ್ಯ ಅಂಶಗಳನ್ನು ಪಟ್ಟಿ ಮಾಡಿಕೊಂಡು ಕ್ರಮವಾಗಿ ಇರಿಸಿಕೊಂಡಿರಬೇಕು. ಉದ್ದವಾದ ಉದ್ಧರಣೆಗಳನ್ನಂತೂ ಎಚ್ಚರಿಕೆಯಿಂದ ಬರೆದಿಟ್ಟುಕೊಳ್ಳಬೇಕು. ನೇರವಾಗಿ ಈ ಚೀಟಿಗಳಿಂದ ಓದದೆ ಸಾಧ್ಯವಾದಷ್ಟೂ ನೆನಪಿನಾಧಾರದಿಂದ ಭಾಷಣ ಮಾಡಬೇಕು. ಮುಖ್ಯಾಂಶಗಳನ್ನು ಮರೆಯಬಾರದು. ಉದ್ಧರಣಿಗಳನ್ನು ತಪ್ಪಾಗಿ ಹೇಳಬಾರದು ಎಂಬ ಕಾರಣದಿಂದಲೇ ಭಾಷಣಕ್ಕೆ ಪೂರಕವಾಗಿ ಈ ಚೀಟಿಗಳನ್ನು ಸಿದ್ಧಪಡಿಸುತ್ತೀರಿ.

ಯಾವ ಭಾಷೆಯಲ್ಲಿ ಭಾಷಣ ಮಾಡುತ್ತೇವೆ. ಆ ಭಾಷೆಯ ಶಬ್ದಭಂಡಾರ ನಿಮ್ಮದಾಗಿರಲಿ. ಪದಗಳಿಗೆ ಎಡತಾಕದಂತೆ 'ಹಾಂ', 'ಹೂಂ'ಗಳನ್ನು ಬಳಸದೆ, ಹೇಳಿದ್ದನ್ನೇ ಮತ್ತೆ ಪುನರಾವರ್ತಿಸದೆ ತಡೆಯಿಲ್ಲದೆ ಭಾಷಣ ಮುಂದುವರಿಯಬೇಕಾದರೆ ವಿಪುಲವಾದ ಪದ ಬತ್ತಳಿಕೆ ಹೊಂದಿರಬೇಕು. ಭಾಷೆಯನ್ನು ಸಮರ್ಥವಾಗಿ ಬಳಸುವವರು ಉತ್ತಮ ಭಾಷಣಕಾರರಾಗಬಲ್ಲರು. ಗಾದೆಗಳು, ನುಡಿಗಟ್ಟುಗಳು ಭಾಷಣ ಮಾಲಿಕೆಯ ರಂಗಿನ ಪಕಳೆಗಳು. ಸೂಕ್ತ ಸಂದರ್ಭದಲ್ಲಿ ಇವುಗಳನ್ನು ಪೋಣಿಸಿ ಸಭಾಸದರ ಮನ ರಂಜಿಸಬಹುದು. ತಯಾರಿ ನಡೆಸುವಾಗ ಪುಂಖಾನುಪುಂಖವಾಗಿ ಹೊಮ್ಮಿದ್ದ ಪದಗಳು ವೇದಿಕೆಯನ್ನು ಏರುತ್ತಿದ್ದಂತೆ ಮನಮಂದಿರದಿಂದ ಪರಾರಿಯಾಗಿ ಬಿಡುವುದನ್ನು ಮೊದಲ ಭಾಷಣದ ದಿನ ಎಲ್ಲರೂ ಅನುಭವಿಸಿರುತ್ತೇವೆ. ಧೃತಿಗೆಡದೆ ಸಮಾನ ಸಂವಾದಿ ಪದಗಳನ್ನು ಜೋಡಿಸುತ್ತಾ ಮಾತು ಆರಂಭಿಸಿದಾಗ ಮರೆಯಾದ ಪದಗಳೆಲ್ಲ ಪಗೆಗಳ ನಿಟ್ಟಿಲ್ವಂ ಮುರಿವೊಡೆ ಎನಗೆ ಪಟ್ಟಂಗಟ್ಟಾ ಎಂದು ಧಾವಿಸಿ ಬರುವುದನ್ನು ನೀವು ಗಮನಿಸಬಹುದು! ಶಬ್ದಕೋಶವನ್ನು ತಲೆಯಲ್ಲಿ ತುಂಬಿಕೊಳ್ಳಲಾಗದಿದ್ದರೂ ವಿಪುಲವಾದ ಪದಭಂಡಾರ

**ಭಾಷಣ ಏಕ ಮುಖ ಸಂವಹನ ಕ್ರಿಯೆ. ಕೇಳುಗರು ತಾಳ್ಮೆಯಿಂದ ನಿಮ್ಮ ಮಾತು ಕೇಳಿರುತ್ತಾರೆ. ಭಾಷಣದ ಕೊನೆಯಲ್ಲಿ ಅವರನ್ನು ವಂದಿಸಲೇಬೇಕು. ಭಾಷಣ ಕಲೆ ಕರಗತವಾದ ಮೇಲೂ ಅದನ್ನು ಟೀಕಾಸ್ತ್ರವಾಗಿ ಬಳಸದೆ ಒಳ್ಳೆಯ ಉದ್ದೇಶ, ವಿಚಾರಗಳ ಪ್ರಸಾರಕ್ಕಷ್ಟೇ ಬಳಸುವುದು ಉಚಿತ ಮತ್ತೊಬ್ಬರ ಮಾತಿನ ಹುಳುಕನ್ನು ವಿಷಯದ ಜಳ್ಳನ್ನು ಎತ್ತಿ ಆಡದೆ ಕೇವಲ ನಮ್ಮ ಅನಿಸಿಕೆಯ ಬಲವಾದ ಪ್ರತಿಪಾದನೆ ಮಾಡಬೇಕು.**

ನಿಮ್ಮಲ್ಲಿದ್ದರೆ ಮಾತ್ರ ನೀವು ಉತ್ತಮ ಭಾಷಣಕಾರರಾಗಬಲ್ಲಿರಿ.

ಉಚ್ಚಾರದ ತೊಡಕು ಎಲ್ಲರಿಗೂ ಇರುವಂಥದ್ದೇ. ಆದರೆ ವೇದಿಕೆಯಲ್ಲಿ ನಾವು ಮಾತನಾಡುತ್ತಿರುವಾಗ, ನೂರಾರು ಸಭಾಸದರು ಕಿವಿಗೊಟ್ಟು ಆಲಿಸುತ್ತಿರುವಾಗ ಉಚ್ಚಾರದೋಷಗಳು ತಲೆದೋರಬಾರದು. ಆತ್ಮೀಯ ಸಂವಾದದಲ್ಲಿ ತಪ್ಪಿ ನುಡಿದಾಗ ಗೆಳೆಯರು ನಕ್ಕು ಸುಮ್ಮನಾಗಬಹುದು. ಆದರೆ ಭಾಷಣದಲ್ಲಿ ಹೀಗಾಗಿ ಬಿಟ್ಟರೆ ಸಭಾಸದರ ನೆನಪಿನಂಗಳದಲ್ಲಿ ನಮ್ಮ ಭಾಷಣ ಅವಿಸ್ಮರಣೀಯ ನಗೆ ಗುಳಿಗೆಯಾಗಿ ಬೇರು ಬಿಡುವ ಸಾಧ್ಯತೆಗಳಿವೆ. ಭಾಷಣವನ್ನು ತಯಾರಿಸುವ ಹಂತದಲ್ಲೇ ಕ್ಲಿಷ್ಟಪದಗಳನ್ನು ಕೈ ಬಿಡುವುದು ಒಳಿತು. ಅವು ಇರಲೇಬೇಕೆಂದಾದರೆ ಅವುಗಳನ್ನು ಗಟ್ಟಿಯಾಗಿ ಮತ್ತೆ ಮತ್ತೆ ಉಚ್ಚರಿಸಿ ಅಭ್ಯಾಸ ಮಾಡಬೇಕು. ಅವುಗಳನ್ನು ಧ್ವನಿ ಮುದ್ರಿಸಿ ನಾವೇ ಒಮ್ಮೆ ಕೇಳಿ ಬಿಟ್ಟರೆ ಒಳಿತು. ಅಲ್ಪಪ್ರಾಣ ಮಹಾಪ್ರಾಣಗಳು ಅದಲುಬದಲಾಗಿ ಬಿಟ್ಟರೆ ಅನರ್ಥ ಪರಂಪರೆಯೇ ಆರಂಭ. 'ಈ ಪ್ರಾಣಸಂಕಟ'ವನ್ನು ಎದುರಿಸುವ ಉಪಾಯವನ್ನು ಅವರವರೇ ಕಂಡುಕೊಳ್ಳಬೇಕು. ಸ್ಪಷ್ಟ ಉಚ್ಚಾರದ ಅಭ್ಯಾಸಕ್ಕೆ ಟಂಗ್ ಟ್ವಿಸ್ಟರ್‌ಗಳನ್ನು (ಉದಾ: ಅವಳರಳೆಳೆದ ಕೊಳಗದಲಿ ಇವರಳೆಳೆದಳು... ಇತ್ಯಾದಿ) ಮತ್ತೆ ಮತ್ತೆ ಉಚ್ಚರಿಸಿ ನಾಲಿಗೆ ತಡೆ ನಿವಾರಿಸಿಕೊಳ್ಳಬಹುದು.

ಧ್ವನಿವರ್ಧಕವನ್ನು ಕುಟ್ಟಿ, ಅದರೊಳಗೆ ಗಾಳಿ ಊದಿ ಪ್ರಾಣ ಸಂಚಾರ ನೀಡಿ! ಮಾತು ಆರಂಭಿಸಬಾರದು. ಆವರೆಗೆ ಮಾತಾಡಿದವರ ಧ್ವನಿಗಳನ್ನು ಹೊತ್ತ ಆ ಮೈಕು ನಿಮ್ಮ ಧ್ವನಿಭಾರವನ್ನು ಹೊರಲಾರದೆ? ನಿಮಗಿಂತ ಮೊದಲು ಮಾತಾಡಿದವರು ಹೇಗೆ ಮಾತನಾಡಿದರೆಂದು ಗಮನಿಸುತ್ತಾ ಮೈಕಿನಿಂದ ಎಷ್ಟು ಅಂತರದಲ್ಲಿ ಮಾತನಾಡಿದರೆ ಧ್ವನಿ ಹದವಾಗಿ ಕೇಳುತ್ತದೆ ಎಂದು ಅವಲೋಕನ ಮಾಡಿರಬೇಕು. ವೇದಿಕೆಯ ಮೇಲಿರುವ ನಾಮಾವಳಿ ಮುಂದಿನ ಸಾಲಿನ ಮಹನೀಯರ ಪಟ್ಟಿ ಒಪ್ಪಿಸದೆ ಔಪಚಾರಿಕವಾಗಿ ಎರಡು ವಾಕ್ಯ ಹೇಳಿ ಭಾಷಣದ ವಿಷಯಕ್ಕೆ ಪ್ರವೇಶಿಸಿಬಿಡಬೇಕು.

ಪುಟ 6 ಕ್ಕೆ ➢

➢ ಪುಟ 5 ರಿಂದ.....

ಮೈಕಿನ ಮುಂದೆ ನಿಂತು ಕೆಮ್ಮಿ ಗಂಟಲು ಸರಿಪಡಿಸಿಕೊಳ್ಳುವುದು, ಅದು ಚಾಲಿತವಾಗಿದೆಯೋ ಇಲ್ಲವೋ ಎಂದು ಆನ್–ಆಫ್ ಮಾಡುವುದು ಭಾಷಣಕಾರನ ಘನತೆಯನ್ನು ತಗ್ಗಿಸುವುದು, ಮೈಕಿನ ಆಧಾರ ಪಟ್ಟಿ (ಣಚಿಟಿಜ)ಹಿಡಿದುಕೊಂಡು ಮಾತನಾಡಬಾರದು. ಹೊಸದಾಗಿ ಭಾಷಣ ಮಾಡಲು ಆರಂಭಿಸುವವರಿಗೆ ತಮ್ಮ ಕೈಗಳನ್ನು ಏನು ಮಾಡಬೇಕೆಂದು ತೋಚದೆ ಅವುಗಳು ತೂರಾಡಲು, ನಡುಗಲು ಅವಕಾಶವಾಗುವುದುಂಟು. ಆಗ ಕೈಗಳನ್ನು ಹಿಂದೆ ಕಟ್ಟಿ, ಒಂದರ ಮಣಿಕಟ್ಟನ್ನು ಮತ್ತೊಂದು ಬಿಗಿಯಾಗಿ ಹಿಡಿದುಕೊಳ್ಳಬೇಕು. ಕೈಗಳನ್ನು ಶರಾಯಿಯ ಕಿಸೆಯಲ್ಲಿ ತೂರಿಸಿಕೊಂಡು ಮಾತನಾಡುವುದು, ಭಾಷಣಕಾರನಿಗೆ ಭೂಷಣವಲ್ಲ. ಅದು ಸಭಾ ಮರ್ಯಾದೆಯನ್ನು ಮೀರಿದಂತೆ. ಭಾಷಣ ಆರಂಭಿಸುವ ಮುನ್ನ ಸಭಾಸದರನ್ನು ವೀಕ್ಷಿಸಿ ಒಂದು ಮುಗುಳ್ನಗೆ ಬೀರುವುದು ಒಳಿತು. ಹಾಗೇ ದೀರ್ಘವಾಗಿ ಉಸಿರೆಳೆದುಕೊಳ್ಳುವುದರಿಂದ (ಅದು ಮೈಕಿನಲ್ಲಿ ಕೇಳಿದಂತೆ) ಆರಂಭದ ಉದ್ವೇಗ ಕಡಿಮೆ ಮಾಡಿಕೊಳ್ಳಬಹುದು.

ಭಾಷಣ ಧ್ವನಿ ಮಾಧ್ಯಮವಾದ್ದರಿಂದ ಭಾವಕ್ಕೆ ತಕ್ಕಂತೆ ಧ್ವನಿಯ ಏರಿಳಿತ ಇದ್ದರೆ ಚೆಂದ. 'ಘಂಟಾಘೋಷವಾಗಿ ಹೇಳುತ್ತೇನೆ' ಎಂದು ಕೀಚು ಧ್ವನಿಯಲ್ಲಿ ಕೂಗುವವರನ್ನು ಚರ್ಚಾಸ್ಪರ್ಧೆಗಳಲ್ಲಿ ನಾವು ಕಾಣುತ್ತೇವೆ. ನಾವಾಡುವ ಮಾತು, ಬಳಸುತ್ತಿರುವ ಪದ, ಹೊಮ್ಮಿಸುತ್ತಿರುವ ಭಾವ ನಮ್ಮ ಕಂಠದ ಧ್ವನಿಯೊಂದಿಗೆ ಮೇಳೈಸಿದಾಗಲೇ ಸಭಾಸದರು ಮಂತ್ರಮುಗ್ಧರಾಗುವುದು. ಡಬ್ಬಿಂಗ್ (ಧ್ವನಿಮುದ್ರಣ) ಕಲಾವಿದರು ನಿಮಿಷಗಳ ಲೆಕ್ಕದಲ್ಲಿ ಸಹಸ್ರಾರು ರೂಪಾಯಿಗಳ ಸಂಭಾವನೆ ಪಡೆಯುವ 'ಕಂಠಸಿರಿ' ಹೊಂದಿರುತ್ತಾರೆ ಎಂಬುದನ್ನು ಭಾಷಣಕಾರರು ಅರಿತಿದ್ದರೆ ತಮ್ಮ ಗಂಟಲನ್ನು ಸರಿಯಾಗಿ ಇಟ್ಟುಕೊಳ್ಳಲು (ಟ್ಯೂನ್ ಮಾಡಿಕೊಂಡಿರಲು) ಸ್ಫೂರ್ತಿ ಹೊಂದಬಹುದು ಪದಗಳನ್ನು ಎಲ್ಲಿ ಒತ್ತಿ ಹೇಳಬೇಕು, ಎಲ್ಲಿ ತೇಲಿಸಿ ಹೇಳಬೇಕು, ಎಲ್ಲಿ ಏರಿಸಬೇಕು, ಎಲ್ಲಿ ಇಳಿಸಬೇಕು, ಎಂದು ಅರಿತಿದ್ದರೆ ಹೇಳುವವರಿಗೆ ಸುಲಭ, ಕೇಳುಗರಿಗೆ ಸಂತಸ.

ಸರಾಗವಾಗಿ ಮಾತು ಹೊರಬೀಳಲಾರಂಭವಾದಾಗ ಪ್ರಸಂಗಕ್ಕೆ ಸೂಕ್ತವಾಗಿ ಕರನ್ಯಾಸಗಳನ್ನು ಮಾಡಬಹುದು. ಚೆನ್ನಾಗಿ ಅಭ್ಯಾಸವಾದ ಹೊರತು ಈ ಪ್ರಯತ್ನ ನಡೆಸದೆ ಗಂಭೀರವಾಗಿ ನಿಂತು ಮಾತು ಮುಗಿಸುವುದು ಸೂಕ್ತ.

ಹೊಸದಾಗಿ ಭಾಷಣ ಮಾಡಲು ಆರಂಭಿಸಿದವರಿಗೆ ಸಭಾಕಂಪನ ಕಾಡುತ್ತದೆ. ಮೈಕಿನ ಮುಂದೆ ನಿಂತಾಗ ಕಾಣುವ ಜಗತ್ತೆ ಬೇರೆ! ಸೃಷ್ಟಿಯಲ್ಲಿರುವ ಎಲ್ಲ ಕಣ್ಣುಗಳೂ ತಮ್ಮತ್ತ ಎಲ್ಲ ಕಿವಿಗಳೂ ತಮ್ಮ ಧನಿಯತ್ತ ಬಾಗಿವೆ ಎಂಬ ಒತ್ತಡವುಂಟಾಗಿ ಭಾಷಣಕಾರ ನಡುಗುತ್ತಾನೆ. ಆಗ ಅವನ ಗಂಟಲು ಒಣಗುತ್ತದೆ, ಧ್ವನಿ ಅಡಗುತ್ತದೆ, ಹೊಟ್ಟೆಯಲ್ಲಿ ಮಿಡತೆಗಳ ಚಂಡಮಾರುತವೇ ಏಳುತ್ತದೆ! ಪ್ರತಿಯೊಬ್ಬ ಶ್ರೇಷ್ಠ ವಾಗ್ಮಿಯೂ ಒಂದಲ್ಲ ಒಂದು ದಿನ ಇದನ್ನು ಎದುರಿಸಿಯೇ ಇರುತ್ತಾನೆ. ಹೆದರದೆ ಮಾತು ಆರಂಭಿಸಬೇಕು. ಸೋತರೂ ಮತ್ತೆ ಮತ್ತೆ ಪ್ರಯತ್ನಿಸಬೇಕು, ತಯಾರಿ ಬಲವಾಗಿದ್ದಾಗ ಸುಲಭವಾಗಿ ಸಭಾಕಂಪನವನ್ನು ಎದುರಿಸಬಹುದು. ಎರಡೂ ಪಾದಗಳನ್ನು ಭದ್ರವಾಗಿ ಊರಿ ನಿಲ್ಲುವುದು ಬಹಳ ಮುಖ್ಯ. ಒಂದು ಪಾದದ ಮೇಲೆ ಭಾರ ಊರಿ ನಿಲ್ಲುವುದು ತ್ರಿಭಂಗಿಯಲ್ಲಿ ನಿಲ್ಲುವ ಪ್ರಯತ್ನ ಆ ಕಾಲಿನಿಂದ ಈ ಕಾಲಿಗೆ ದೇಹದ ಭಾರ ವರ್ಗಾಹಿಸುತ್ತಿರುವುದು ಇವೆಲ್ಲ ಆತ್ಮವಿಶ್ವಾಸದ ಕೊರತೆಯನ್ನು ಸೂಚಿಸುತ್ತದೆ. ಎರಡೂ ಪಾದಗಳನ್ನು ಭದ್ರವಾಗಿ ಊರಿ ನಿಂತು ಎದೆಯುಬ್ಬಿಸಿ, ತಲೆ ಎತ್ತಿ ಸಭಾಸದರನ್ನು ಅವಲೋಕಿಸಿ ಮುಗುಳ್ನಗೆ ಚೆಲ್ಲಿ ಮಾತು ಆರಂಭಿಸಿ. ಆಗ ನಿಮ್ಮ ಭಾಷಣ ಸರಾಗವಾಗಿ ಮುಂದುವರಿಯುವುದು.

ಭಾಷಣಕಾರ ಸ್ವಚ್ಛವಾದ ಬಟ್ಟೆ ಧರಿಸಿರಬೇಕು. ಅದು ತೀರಾ ಕಣ್ಣಿಗೆ ರಾಚುವ ಬಣ್ಣವನ್ನೋ, ಕಸೂತಿಯನ್ನೋ ಹೊಂದಿರಬಾರದು. ಅವನನ್ನು/ಅವಳನ್ನು ನೋಡಿದರೆ ಅನುಕಂಪ ಉಕ್ಕುವಷ್ಟು ಕರುಣಾಜನ್ಯ ಮುಖಲಕ್ಷಣ (ಭಾವ) ಧರಿಸಿದರೆ ಪ್ರಸನ್ನತೆ, ಆತ್ಮವಿಶ್ವಾಸಗಳ ಅವನು/ಳು ಬಿಂಬಿಸುತ್ತಿರಬೇಕು. ಸಂಯೋಜಕರೊಂದಿಗೆ ಸೌಹಾರ್ದಯುತವಾಗಿ ನಡೆದು ಕೊಳ್ಳಬೇಕು. ಕಾಫಿ ಬಿಸಿ ಸಾಲದು, ವೇದಿಕೆಯ ಇಂತಹ ಕುರ್ಚಿ ನನಗಿರಲಿ, ನನ್ನೊಂದಿಗೆ ಬಂದವರಿಗೆ ಮುಂದುಗಡೆಯೇ ಸ್ಥಳಾವಕಾಶ ಮಾಡಿಸಿ... ಇತ್ಯಾದಿ ಬೇಡಿಕೆ ಆಕ್ಷೇಪಗಳನ್ನು ಮಾಡದೆ ಸಂಯೋಜಕ ಪ್ರೀತಿ–ವಿಶ್ವಾಸಗಳನ್ನಷ್ಟೆ ಗಳಿಸಿ ಹಿಂದಿರುಗಬೇಕು. ಅವರು ಕೊಟ್ಟ ನೆನಪಿನ ಕಾಣಿಕೆಯಿಂದಲೇ ಅವರನ್ನು ಚುಚ್ಚುವ ಇತರ ಸಂಯೋಜಕರೆದುರು ಇದನ್ನು 'ಮೊಳ ಹಾಕುವ' ಕಾರ್ಯವಂತೂ ಅತ್ಯಂತ ಹೇಯ, ಸಭಾಸದರನ್ನು, ಸಂಯೋಜಕರನ್ನು ನಿಮ್ಮವರೆಂದೇ ಕಂಡಾಗ ಅಲ್ಲಿ ಆಗಬಹುದಾದ ಲೋಪದೋಷಗಳು ನಿಮ್ಮನ್ನು ಕಾಡುವುದಿಲ್ಲ.

ಭಾಷಣ ಏಕ ಮುಖ ಸಂವಹನ ಕ್ರಿಯೆ. ಕೇಳುಗರು ತಾಳ್ಮೆ ಯಿಂದ ನಿಮ್ಮ ಮಾತು ಕೇಳಿರುತ್ತಾರೆ. ಭಾಷಣದ ಕೊನೆಯಲ್ಲಿ ಅವರನ್ನು ವಂದಿಸಲೇಬೇಕು. ಭಾಷಣ ಕಲೆ ಕರಗತವಾದ ಮೇಲೂ ಅದನ್ನು ಟೀಕಾಸ್ತ್ರವಾಗಿ ಬಳಸದೆ ಒಳ್ಳೆಯ ಉದ್ದೇಶ, ವಿಚಾರಗಳ ಪ್ರಸಾರಕ್ಕಷ್ಟೇ ಬಳಸುವುದು ಉಚಿತ ಮತ್ತೊಬ್ಬರ ಮಾತಿನ ಹುಳುಕನ್ನು ವಿಷಯದ ಜಳ್ಳನ್ನು ಎತ್ತಿ ಆಡದೆ ಕೇವಲ ನಮ್ಮ ಅನಿಸಿಕೆಯ ಬಲವಾದ ಪ್ರತಿಪಾದನೆ ಮಾಡಬೇಕು.

ಭಾಷಣವನ್ನು ಒಂದು ಯಜ್ಞದಂತೆ ಭಾವಿಸಬೇಕು. ಮಾತಿನ ಹವಿಸ್ಸು ಮಹೋದ್ದೇಶಕ್ಕೆ ಸಲ್ಲಬೇಕು. ನಿಮ್ಮಧ್ವನಿ ಕೇಳುವ ಕಿವಿಗಳನ್ನು ಧ್ವನಿಯಾಚನೆಗೆ ಒಯ್ಯಬೇಕು. ನಿಮ್ಮ ಮನದ ಚಂದನ ಮಾತಿನ ಕಂಪಾಗಿ ಹರಡಬೇಕು. ನಿಮ್ಮ ಭಾವಬಿಂದು ಶ್ರೋತೃ ಸಮುದಾಯವನ್ನು ಚಿಂತನ ಸಿಂಧುವಿನಲ್ಲಿ ಮುಳುಗಿಸಬೇಕು. ಆಗ ನಿಮ್ಮದು ಯಶಸ್ವೀ ಭಾಷಣ. ನೀವೊಬ್ಬರು ಯಶಸ್ವೀ ಭಾಷಣಕಾರರು.

●

# ಶಾಲೆ ಬಿಟ್ಟ ಮಕ್ಕಳನ್ನು ಮರಳಿಗೆ ಶಾಲೆಗೆ ತರುವಲ್ಲಿ ; ಎನ್‌ಇಪಿ–2020 ಯಲ್ಲಿಯ ಚಿಂತನೆ

**ಚಿದಾನಂದ ಆ ಕೇ ಪಾಟೀಲ್**
**ಪ್ರಧಾನ ಕಾರ್ಯದರ್ಶಿ, ಕ.ರಾ.ಮಾ.ಶಿ.ಸಂಘ**
**ಸದಸ್ಯರು, ಎನ್.ಇ.ಪಿ2020**
**ಅನುಷ್ಠಾನ ಸಮಿತಿ(ಶಾಲಾ ಶಿಕ್ಷಣ),**
**ಕರ್ನಾಟಕ ಸರ್ಕಾರ, ಕರ್ನಾಟಕ**



ಸಹ ಹೃದಯ ಓದುಗರೆ...

ಈ ಲೇಖನದ ಪ್ರಾರಂಭದಲ್ಲಿಯೇ ತಮಗೆಲ್ಲ ಧನ್ಯವಾದಗಳನ್ನು ಹೇಳುವೆ. ಏಪ್ರಿಲ್–2022ರ ಸಂಚಿಕೆಯಲ್ಲಿಯ ನನ್ನ ಲೇಖನಕ್ಕೆ ಶಿಕ್ಷಣ ಇಲಾಖೆಯ ಹಿರಿಯ, ಕಿರಿಯ ಅಧಿಕಾರಿಗಳು ಮತ್ತು ಶಿಕ್ಷಕ ಸಮುದಾಯ ಹಾಗೂ ಸಮಾಜದ ಶೈಕ್ಷಣಿಕ ಹಿತ ಚಿಂತಕರು ಸಲಹೆ ಸೂಚನೆಯನ್ನು ಮತ್ತು ಮೆಚ್ಚುಗೆಯನ್ನು ಸೂಚಿಸಿರುವಿರಿ. ತಮ್ಮೆಲ್ಲರ ಅಭಿಪ್ರಾಯಗಳು ನನಗೆ ಪ್ರೇರಣಾದಾಯಕ. ಈ ಸಂಚಿಕೆಯಲ್ಲಿಯ ಲೇಖನಕ್ಕೂ ತಮ್ಮಿಂದ ಸಲಹೆ ಸೂಚನೆಗಳನ್ನು ಅಪೇಕ್ಷಿಸುವೆ.

**DROPOUT**

ಶಿಕ್ಷಣದ ಸಾರ್ವತ್ರಿಕರಣದಲ್ಲಿ ಸ್ವಾತಂತ್ರ್ಯದ ನಂತರ ಎದುರಿಸುತ್ತಿರುವ ಬಹುದೊಡ್ಡ ಸಮಸ್ಯೆ ಮಕ್ಕಳು ಶಾಲೆಯಿಂದ ಹೊರಗುಳಿದಿರುವುದು(ಅರ್ಧಕ್ಕೆ ಶಾಲೆಬಿಡುವ ಅಥವಾ ಶಾಲೆಗೇ ಬರದೆ ಇರುವವರು) ಎನ್‌ಇಪಿ–2020ಯಲ್ಲಿ ಹೆಚ್ಚು ಮಹತ್ವದ್ದಾಗಿ ಮೂಡಿಬಂದಿದೆ. ಮಕ್ಕಳು ಶಾಲೆಗೆ ದಾಖಲಾಗಿದ್ದಾರೆಯೇ ಮತ್ತು ಹಾಜರಾಗುತ್ತಿದ್ದಾರೆಯೇ ಎಂದು ಖಚಿತಪಡಿಸಿಕೊಳ್ಳುವುದು ಶಾಲಾ ವ್ಯವಸ್ಥೆಯ ಪ್ರಾಥಮಿಕ ಗುರಿಗಳಲ್ಲಿ ಒಂದಾಗಬೇಕು ಎಂದು ಹೇಳಿದೆ.

### DROPOUT ಕಡಿಮೆ ಮಾಡಲು ಈಗ ಮಾಡುತ್ತಿರುವ ಕ್ರಮಗಳು

- ಸರ್ವಶಿಕ್ಷಣ ಅಭಿಯಾನದ ಮೂಲಕ ಎಲ್ಲಾ ಅರ್ಹ ಮಕ್ಕಳಿಗೆ ಶಿಕ್ಷಣ ನೀಡುವುದಕ್ಕೆ ಅನೇಕ ಉಪಕ್ರಮಗಳನ್ನು ಹಾಕಿಕೊಂಡಿದ್ದೇವೆ.
- ಶಿಕ್ಷಣ ಹಕ್ಕು ಕಾಯ್ದೆಯನ್ನು ಜಾರಿಗೆ ತರುವುದರ ಮೂಲಕ ಪ್ರಾಥಮಿಕ ಶಿಕ್ಷಣದಲ್ಲಿ ಸಾರ್ವತ್ರಿಕ ದಾಖಲೆಯನ್ನು ಸಾಧಿಸುವಲ್ಲಿ ಪ್ರಗತಿ ಸಾಧಿಸಿದ್ದೇವೆ.

### ಮರಳಿ ಶಾಲೆಗೆ ಕರೆತರುವ ಪ್ರಯತ್ನದ ಅವಶ್ಯಕತೆ

**Gross Enrolement Ratio (GER) ಪ್ರಕಾರ ದಾಖಲಾತಿ ಪ್ರಮಾಣ**

| ಕ್ರ. ಸಂ | ತರಗತಿ | ಪ್ರಮಾಣ (ಶೇಕಡಾವಾರು) |
|---|---|---|
| 01 | 1–5 | 100% |
| 02 | 6–5 | 90.9% |
| 03 | 9–10 | 79.3% |
| 04 | 11–12 | 56.5% |

ಈ ಅಂಶಗಳನ್ನು ಗಮನಿಸಿದರೆ, 5ನೇ ಮತ್ತು 8ನೇ ತರಗತಿಯ ನಂತರ ಬಹಳಷ್ಟು ವಿದ್ಯಾರ್ಥಿಗಳು ಪ್ರಾಥಮಿಕ ಶಿಕ್ಷಣವನ್ನು ಪೂರೈಸದೆ ಶಾಲೆಯಿಂದ ಹೊರಗುಳಿಯುತ್ತಿದ್ದಾರೆ. ಇದು ಶಿಕ್ಷಣದ ಸಾರ್ವತ್ರಿಕರಣಕ್ಕೆ ತಡೆಗೋಡೆ ಕಟ್ಟುತ್ತಿದೆ. ಅದಲ್ಲದೆ National Sample Survey Office (NSSO) ಪ್ರಕಾರ ದೇಶದಲ್ಲಿ 2017–18ರಲ್ಲಿ 6–17 ವಯೋಮಾನದ ಮಕ್ಕಳ ಸಂಖ್ಯೆ 3.22 ಕೋಟಿಯಾಗಿದೆ. ಈ ಎಲ್ಲ ಮಕ್ಕಳು ಶಾಲೆಗೆ ಕರೆತರುವ ಪ್ರಯತ್ನದ ಅವಶ್ಯಕತೆ ಇದೆ.

### ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಕರೆತರಲು ಎನ್‌ಇಪಿ–2020 ಸೂಚಿಸಿದ ಮಾರ್ಗಗಳು

- ಬುನಾದಿ ಹಂತದಿಂದ 12ನೇ ತರಗತಿಯವರೆಗೆ ಗುಣಮಟ್ಟದ ಶಿಕ್ಷಣ ದೊರೆಯಲು ಪರಿಣಾಮಕಾರಿ ಮತ್ತು ಸಾಕಷ್ಟು ಪ್ರಮಾಣದ ಮೂಲ ಸೌಕರ್ಯಗಳನ್ನು ಒದಗಿಸುವುದು.
- ಪ್ರತಿ ಹಂತದಲ್ಲಿಯೂ ತರಬೇತಿ ಹೊಂದಿದ ಶಿಕ್ಷಕರನ್ನು ಒದಗಿಸುವುದು.
- ಸರ್ಕಾರಿ ಶಾಲೆಗಳ ಮೇಲಿನ ವಿಶ್ವಾಸಾರ್ಹತೆಯನ್ನು ಪುನಃ ಸ್ಥಾಪಿಸಲು ಕ್ರಮಕೈಗೊಳ್ಳುವುದು.
- ಶಾಲೆಗಳಿಲ್ಲದ ಪ್ರದೇಶದಲ್ಲಿ ಗುಣಮಟ್ಟದ ಶಾಲೆಗಳನ್ನು ನಿರ್ಮಿಸುವುದು.
- ವಿಶೇಷವಾಗಿ ಹೆಣ್ಣು ಮಕ್ಕಳಿಗೆ ಸುರಕ್ಷಿತ ಮತ್ತು ಪ್ರಾಯೋಗಿಕವಾದ ಸಂಚಾರಿ ಸೌಲಭ್ಯಗಳನ್ನು ಮತ್ತು ವಸತಿ ಶಾಲೆಗಳನ್ನು ಸ್ಥಾಪಿಸುವುದು.
- ವಲಸೆ ಕಾರ್ಮಿಕರ ಮಕ್ಕಳಿಗಾಗಿ ಸಮಾಜದ ಸಹಕಾರದೊಂದಿಗೆ ಪರ್ಯಾಯ ಮತ್ತು ನವೀನ ಶಿಕ್ಷಣ ಕೇಂದ್ರವನ್ನು ಸ್ಥಾಪಿಸುವುದು.
- ವಿದ್ಯಾರ್ಥಿಗಳು ಶಾಲೆಗೆ ದಾಖಲಾಗಿದ್ದಾರೆಯೇ ಹಾಗು ಹಾಜರಾಗುತ್ತಿದ್ದಾರೆಯೇ ಎನ್ನುವುದನ್ನು ಗಮನಿಸುವುದು.
- ವಿದ್ಯಾರ್ಥಿಗಳು ಕಲಿಕೆಯಲ್ಲಿ ಹಿಂದುಳಿದಿದ್ದಾರೆ ಮತ್ತು ಶಾಲೆಯಿಂದ ಹೊರಗುಳಿದಿದ್ದಾರೆ ಎನ್ನುವುದರ ಬಗ್ಗೆ ನಿರಂತರ ನಿಗಾ ಇಡುವುದು.
- ಶಾಲೆಯಿಂದ ಹೊರಗುಳಿದ ಮಕ್ಕಳಿಗೆ ಪುನಃ ಪ್ರವೇಶಿಸಲು ಸೂಕ್ತ ವ್ಯವಸ್ಥೆ ಕಲ್ಪಿಸುವುದು.

ಪುಟ 9 ಕ್ಕೆ ➢

# ಸ್ವಾತಂತ್ರ್ಯ ಹೋರಾಟ ಹಿನ್ನೋಟ, ಮುನ್ನೋಟ

**ಸ್ವಾತಂತ್ರ್ಯ ಅಮೃತೋತ್ಸವದ ಸಂದರ್ಭದಲ್ಲಿ ಈ ಘಟನೆಗಳು ಎಲ್ಲರ ಸ್ಮರಣೆಗೆ ಬರಬೇಕು ಎಂಬ ಉದ್ದೇಶದಿಂದ ಈ ಲೇಖನಮಾಲೆ ಈ ಪುಟಗಳು ಸು. ರಾಮಣ್ಣನವರ ಸ್ವಾತಂತ್ರ್ಯ ಹೋರಾಟ ಪುಸ್ತಕದ ಒಂದು ಭಾಗ. ಇದು 3-4 ಕಂತುಗಳು ಬರುತ್ತದೆ**


ಶ್ರೀ ಸು. ರಾಮಣ್ಣ

(ಹಿಂದಿನ ಸಂಚಿಕೆಯಿಂದ...)

## “ತುಂಡಾದ ಭಾರತ ಒಂದಾಗಲೇಬೇಕು”

ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದ ಅಸಂಖ್ಯ ಹೋರಾಟಗಾರರೆಲ್ಲರೂ ಅಖಂಡ ಭಾರತದ ಕನಸು ಕಂಡಿದ್ದರು. 1903ರಲ್ಲಿ ರಾಜಕೀಯವನ್ನು ಪ್ರವೇಶಿಸಿ ಕಾಂಗ್ರೆಸ್‌ನ ಉಗ್ರಗಾಮೀ ಪಂಥಕ್ಕೆ ಸೇರಿ 1910ರವರೆಗೆ ಸಕ್ರಿಯವಾಗಿ ದುಡಿದ ಶ್ರೀ ಅರವಿಂದಘೋಷ್ ಅವರಲ್ಲೊಬ್ಬರು. ನೂರಾರು ಕ್ರಾಂತಿಕಾರಿಗಳಿಗೆ ಪ್ರೇರಣೆ ನೀಡಿದವರು. ಬ್ರಿಟಿಷರ ಅವಕೃಪೆಗೆ ಪಾತ್ರರಾಗಿ 5 ಮೇ 1908ರಿಂದ 5 ಮೇ 1909ರವರೆಗೆ ಆಲೀಪುರ ಜೈಲಿನಲ್ಲಿ ಖೈದಾಗಿದ್ದವರು. ನಿರಪರಾಧಿ ಎಂದು ಜೈಲಿನಿಂದ ಬಿಡುಗಡೆಯಾದ ನಂತರ ಆಧ್ಯಾತ್ಮ ಸಾಧನೆಗೆಂದು 1910ರಲ್ಲಿ ಬ್ರಿಟಿಷರ ಕಣ್ತಪ್ಪಿಸಿ ಪಾಂಡಿಚೇರಿ ಸೇರಿ ಅಲ್ಲಿ ಸಾಧನೆಮಾಡಿ ಯೋಗಿ ಅರವಿಂದರಾದರು. ಸನ್ಯಾಸಿಯಾದರೂ, ಮನಸ್ಸು ಸ್ವಾತಂತ್ರ್ಯ ದಾಹದಿಂದ ತುಡಿಯುತ್ತಿತ್ತು. ಅವರ ಜನ್ಮದಿನವಾದ ಆಗಸ್ಟ್ 15ರಂದೇ ಭಾರತ ಸ್ವಾತಂತ್ರ್ಯಗಳಿಸಿತು. ಆದರೆ ಅದು ಅವರು ಬಯಸಿದ ಸ್ವಾತಂತ್ರ್ಯವಾಗಿರಲಿಲ್ಲ! ಅದಕ್ಕೆ ಶ್ರೀ ಅರವಿಂದರು ಹೇಳಿದರು:

“ಭಾರತ ಸ್ವತಂತ್ರವಾಯಿತು, ಆದರೆ ಐಕ್ಯತೆಯನ್ನು ಸಾಧಿಸಲಿಲ್ಲ. ಕೇವಲ ಛಿದ್ರವಾದ ಭಗ್ನ ಸ್ವಾತಂತ್ರ್ಯ ದೊರೆತಿದೆ. ಹಿಂದು ಮತ್ತು ಮುಸ್ಲಿಂ ಎಂಬ ಜಾತೀಯ ವಿಭಜನೆಗೆ ತಾತ್ಕಾಲಿಕವಾಗಿ ಮೂರ್ತಸ್ವರೂಪ ಬಂದಿದೆ. ಆದರೆ ಕಾಂಗ್ರೆಸ್ ಸಂಸ್ಥೆಯು, ನಮ್ಮ ರಾಷ್ಟ್ರವೂ ಈಗ ಆಗಿರುವ ವಿಭಜನೆ ಶಾಶ್ವತವೆಂದು ಭಾವಿಸುವುದಿಲ್ಲವೆಂದು ನಂಬುತ್ತೇನೆ. ಇದೊಂದು ತಾತ್ಕಾಲಿಕ ಹೆಜ್ಜೆಯೆಂದೇ ಭಾವಿಸಬೇಕು. ಏಕೆಂದರೆ ಈ ವಿಭಜನೆ ಹೀಗೇ ಉಳಿದರೆ, ಭಾರತ ಶಾಶ್ವತವಾಗಿ ದುರ್ಬಲವಾಗಿ ಹೋಗುವುದು; ಅಂತಃಕಲಹ, ಪರರ ಆಕ್ರಮಣಕ್ಕೆ ಇದು ದಾರಿ ಮಾಡಿಕೊಡುವುದು. ದೇಶದ ಈ ವಿಭಜನೆ ಹೋಗಲೇಬೇಕು. ಸಾಧ್ಯವಾದರೆ ಶಾಂತಿಯುತ ಒಪ್ಪಂದದ ಮೂಲಕವೋ, ಒಂದಾಗಬೇಕಾದ ಅವಶ್ಯಕತೆಯಿಂದಲೋ ಅಂತೂ ದೇಶ ಒಂದಾಗಲೇಬೇಕು. ಅದು ಹೇಗಾಗುತ್ತದೆ ಎನ್ನುವುದು ಮುಖ್ಯವಲ್ಲ; ಆದರೆ ಆಗಬೇಕಾದ್ದು ಮುಖ್ಯ. ಯಾವ ರೀತಿಯಿಂದಲಾದರೂ ಈ ವಿಭಜನೆ ಹೋಗಲೇಬೇಕು; ಹೋಗಿಯೇ ಹೋಗುವುದು.”– ಇದು ಶ್ರೀ ಅರವಿಂದರ ಭವಿಷ್ಯವಾಣಿ!



## ಅರವಿಂದರ ಭವಿಷ್ಯವಾಣಿ ನಿಜವಾದೀತೇ? ಏಕಾಗಬಾರದು?

ಇಂದು ಜಗತ್ತಿನಲ್ಲಿ ಅತ್ಯಂತ ಆಧುನಿಕ ರಾಷ್ಟ್ರವೆಂದೂ ಕರೆಸಿಕೊಳ್ಳುತ್ತಿರುವ ಇಸ್ರೇಲ್ ಪರಾಧೀನತೆಯಲ್ಲೇ ಎರಡು ಸಾವಿರ ವರ್ಷಗಳನ್ನು ಕಳೆದು 1948 ಮೇ 14 ರಂದು ಸ್ವಾತಂತ್ರ್ಯವನ್ನು ಗಳಿಸಿತು. ಅಲ್ಲಿಯವರೆಗೆ ಇಸ್ರೇಲಿನ ರಾಷ್ಟ್ರೀಯರಾದ 'ಜ್ಯೂ' ಜನಾಂಗಕ್ಕೆ ತಮ್ಮದೆಂಬ ದೇಶವೇ ಇರಲಿಲ್ಲ. ಜಗತ್ತಿನ ಬೇರೆ ಬೇರೆ ದೇಶಗಳಲ್ಲಿ ಹರಿದು ಹಂಚಿಹೋಗಿದ್ದ ಲಕ್ಷಾಂತರ ಜ್ಯೂಗಳು ತಮ್ಮ ಮಾತೃಭೂಮಿಗೆ ಹಿಂದಿರುಗಿ ಹೊಸ ಬದುಕನ್ನು ಕಟ್ಟಿಕೊಂಡರು. ಆದರೆ ಇದು ಸಾಧ್ಯವಾದದ್ದು ಅವರ ಹಿಂದಿನ 40 ಪೀಳಿಗೆಗಳು ತಮ್ಮ ಹೃದಯದಲ್ಲಿ ಹಚ್ಚಿಟ್ಟಿದ್ದ ಸತ್ವ ಸ್ವಾಭಿಮಾನಗಳ ಕಿಡಿ. ಸ್ವಾತಂತ್ರ್ಯದಾಹ ದೇಶಭಕ್ತಿಯ ಜ್ವಾಲೆಯನ್ನು ಆರಲು ಬಿಡದೆ, ಆ ಕಿಚ್ಚನ್ನೇ ನಿರಂತರವಾಗಿ ತಮ್ಮ ಮುಂದಿನ ಪೀಳಿಗೆಗಳಿಗೆ ದಾಟಿಸಿದ್ದು. ಅವರ ಮೂರು ಪ್ರಮುಖ ಹಬ್ಬಗಳಾದ ಸಮರ್ಪಣಾದಿನ (Hanukkah- Feast of Dedication), ಪ್ರಾಯಶ್ಚಿತ ದಿನ (Yom Kippur- day of atonement) ಮತ್ತು ನೂತನ ವರ್ಷಾಚರಣೆಯಂದು (Rosh Hasana). ಪೂಜೆಯ ನಂತರ ತಮ್ಮ ಮಕ್ಕಳ ಹೃದಯದಲ್ಲಿ ಬಿತ್ತಿದ್ದು “ಮುಂದಿನ ವರ್ಷ “ಜೆರೂಸಲೇಂನಲ್ಲಿ” ಎಂಬ ಆಶಾಭಾವನೆಯನ್ನು. ಅಷ್ಟೇ ಅಲ್ಲ, ಇಬ್ಬರು ಜ್ಯೂಗಳು ಪರಸ್ಪರ ಭೇಟಿಯಾದಾಗ ಕುಶಲ ಪ್ರಶ್ನೆಮಾಡುತ್ತಾ 'ಮುಂದಿನ ವರ್ಷ ಜೆರೊಸಲೇಂನಲ್ಲಿ' ಎಂದು ಬೀಳ್ಕೊಡುತ್ತಿದ್ದರು. ಈ ಕನಸನ್ನು ಪೀಳಿಗೆ, ಪೀಳಿಗೆಗಳು ನಿರಂತರವಾಗಿ ತಮ್ಮ ಮುಂದಿನ ಪೀಳಿಗೆಗೆ ದಾಟಿಸಿದ ಫಲ, ಅವರುಗಳ ಕನಸಿನ ಸಾಕಾರರೂಪ ಇಂದಿನ ಆಧುನಿಕ ಇಸ್ರೇಲ್.

ಯುರೋಪ್ ಖಂಡದ, ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಜರ್ಮನಿ ಅತಿಮುಖ್ಯವಾದ ದೇಶ. 1934ರಲ್ಲಿ ಅಡಾಲ್ಫ್ ಹಿಟ್ಲರ್

ಪುಟ 9 ಕ್ಕೆ ➤

➢ ಪುಟ 7 ರಿಂದ.....

- ಬುನಾದಿ ಹಂತದಿಂದ 12ನೇ ತರಗತಿಯವರೆಗೆ 18 ವರ್ಷದ ಮಕ್ಕಳಿಗೆ ಸಮನ್ವಯ ಮತ್ತು ಗುಣಮಟ್ಟದ ಶಿಕ್ಷಣ ಒದಗಿಸುವುದು. ಅದಕ್ಕಾಗಿ ಸೌಲಭ್ಯಯುಕ್ತ ವ್ಯವಸ್ಥೆಗಳನ್ನು ಜಾರಿಗೆ ತರುವುದು.
- ಮಕ್ಕಳ ಕಲಿಕೆಗೆ ಪೂರಕವಾಗಿರಲು ಮತ್ತು ಶಾಲೆಯಿಂದ ಹೊರಗುಳಿಯದಂತೆ ಇರಲು ಶಿಕ್ಷಕರು, ಆಪ್ತ ಸಲಹೆಗಾರರು, ತರಬೇತಿ ಪಡೆದ ಸಾಮಾಜಿಕ ಕಾರ್ಯಕರ್ತರು ವಿದ್ಯಾರ್ಥಿಗಳೊಂದಿಗೆ ಮತ್ತು ಪೋಷಕರೊಂದಿಗೆ ನಿರಂತರ ಸಂಪರ್ಕದಲ್ಲಿರುವುದು.
- ಶಾಲೆ ಬಿಡುವ ಮಕ್ಕಳನ್ನು ತಡೆಗಟ್ಟಲು ಸರ್ಕಾರದ ಅನೇಕ ಇಲಾಖೆಗಳು ಒಂದಕ್ಕೊಂದು ಸಹಯೋಗದೊಂದಿಗೆ ಕಾರ್ಯಮಾಡಬೇಕು. ಅದರಲ್ಲಿಯೂ ಸಾಮಾಜಿಕ ಸಬಲೀಕರಣ ಇಲಾಖೆಗಳು ಮತ್ತು ವಿಕಲಚೇತನ ಇಲಾಖೆಗಳ ಸಹಯೋಗ ಬಹಳ ಅವಶ್ಯಕ.
- Social–economically disadvantaged groups (SEDG) ಗಳ ಗುಂಪುಗಳಿಗೆ ಒಳಪಡುವ ಮಕ್ಕಳ ಕಲಿಕೆಯನ್ನು ಖಚಿತಪಡಿಸಿಕೊಳ್ಳುವುದು ಮತ್ತು ಸ್ಥಳೀಯ ಭಾಷಾ ಜ್ಞಾನ ಹೊಂದಿರುವ ಶಿಕ್ಷಕರನ್ನು Drop out ಮಕ್ಕಳನ್ನು ಹೊಂದಿರುವ ಪ್ರದೇಶಗಳಿಗೆ ನಿಯೋಜಿಸುವುದು. ಜೊತೆಯಲ್ಲಿ ಪಠ್ಯಕ್ರಮ ಹೆಚ್ಚು ಆಕರ್ಷಕವಾಗಿ ರುವಂತೆ ನೋಡಿಕೊಳ್ಳುವುದು.
- National Institute of Open Schooling ಮತ್ತು Open and Distance Learning ಮೂಲಕ ಕಲಿಕೆಯಿಂದ ದೂರ ಉಳಿದ ಮಕ್ಕಳನ್ನು ಹತ್ತಿರಕ್ಕೆ ತರುವುದು ಅದಕ್ಕಾಗಿ ಪ್ರತಿ ರಾಜ್ಯವು State Institutes of open Schooling ಸ್ಥಾಪಿಸಬೇಕು.
- ಸಾಂಸ್ಕೃತಿಕ, ಭೌಗೋಳಿಕತೆ ಮತ್ತು ಜನಸಂಖ್ಯೆ ವಿನ್ಯಾಸದ ಕಾರಣದಿಂದ ಮಕ್ಕಳ ಶಾಲೆಯಿಂದ ದೂರ ಉಳಿಯದಂತೆ ನೋಡಲು ಅವಶ್ಯಕ ನಿರ್ಬಂಧಗಳನ್ನು ಸಡಿಲಿಸಿ ಶಾಲೆಗಳನ್ನು ಸ್ಥಾಪಿಸುವುದು. ಸಾರ್ವಜನಿಕ ಸೇವಾ ಮನೋಭಾವ ಹೊಂದಿದ ವ್ಯಕ್ತಿ ಅಥವಾ ಸಂಸ್ಥೆಗಳ ಸಹಭಾಗಿತ್ವ ಈ ಕಾರ್ಯಕ್ಕೆ ಉತ್ತೇಜಿಸುವುದು.
- ಮಕ್ಕಳು ಶಾಲೆಯಿಂದ ದೂರ ಉಳಿಯದಂತೆ ಮಾಡಲು ಸ್ವಯಂಸೇವಕ ಪ್ರಯತ್ನಗಳಲ್ಲಿ ಸಮುದಾಯ ಮತ್ತು ಹಳೆಯ ವಿದ್ಯಾರ್ಥಿಗಳು ಪಾಲ್ಗೊಳ್ಳುವಂತೆ ಮಾಡುವುದು. ಈ ನಿಟ್ಟಿನಲ್ಲಿ ಉತ್ಸಾಹಿ ಮತ್ತು ಆರೋಗ್ಯವಂತ ಹಿರಿಯ ನಾಗರಿಕರು ಶಾಲೆಯ ಹಿರಿಯ ವಿದ್ಯಾರ್ಥಿಗಳು ಮತ್ತು ಸ್ಥಳೀಯ ಸಮುದಾಯದ ಸದಸ್ಯರ ಬೆಂಬಲವನ್ನು ಸೂಕ್ತವಾಗಿ ಪಡೆಯುವುದು. ಈ ಉದ್ದೇಶಕ್ಕಾಗಿ ಸ್ವಯಂ ಸೇವಕರು, ನಿವೃತ್ತ ವಿಜ್ಞಾನಿಗಳು/ ಸರ್ಕಾರಿ/ಅರೆ ಸರ್ಕಾರಿ ನೌಕರರು ಹಳೆ ವಿದ್ಯಾರ್ಥಿಗಳು ಮತ್ತು ಶಿಕ್ಷಕರ ದತ್ತಾಂಶವನ್ನು ಸಂಗ್ರಹಿಸಿ ಈ ಕಾರ್ಯದಲ್ಲಿ ಬಳಸಿಕೊಳ್ಳುವುದು.

ಎನ್‌ಇಪಿ–2020 ತನ್ನ ಪ್ರಮುಖ ಆಶಯುಗಳಲ್ಲಿ ವಿದ್ಯಾರ್ಥಿಗಳು ಶಾಲೆಯಿಂದ ಹೊರಗುಳಿಯಬಾರದು ಮತ್ತು ಬುನಾದಿ ಶಿಕ್ಷಕರಿಂದ 12ನೇ ತರಗತಿಯವರೆಗೆ ನಿರಂತರ ತಡೆಯಿಲ್ಲದ ಕಲಿಕೆ ನಡೆಯಬೇಕೆಂದು ಅನೇಕ ಕ್ರಮಗಳು ಕೈಗೊಳ್ಳಲು ಸೂಚಿಸಿದೆ. ಅದರೆ ಇದು ಯಶಸ್ವಿಯಾಗಬೇಕಾದರೆ ಸಮಾಜದಲ್ಲಿರುವ ನಮ್ಮೆಲ್ಲರ ಪ್ರಯತ್ನವು ಅವಶ್ಯಕ. ●

➢ ಪುಟ 8 ರಿಂದ.....

ಅದರ ಸರ್ವಾಧಿಕಾರಿಯಾಗಿ ಜಗತ್ತಿನ ಎರಡನೇ ಮಹಾಯುದ್ಧಕ್ಕೂ ಕಾರಣಕರ್ತನಾದ. 1939ರ ಸೆಪ್ಟೆಂಬರ್ 1 ರಂದು ಪ್ರಾರಂಭವಾದ ಯುದ್ಧ 6 ವರ್ಷಗಳ ಕಾಲ ನಡೆದು 2 ಸೆಪ್ಟೆಂಬರ್ 1939ರ ವೇಳೆಗೆ 75 ರಿಂದ 85 ಮಿಲಿಯನ್ ಜನಗಳನ್ನು ಆಹುತಿ ಪಡೆಯಿತು. 1945ರ ಮೇ 7 ರಂದು ಜರ್ಮನಿ, ಸಂಘಟಿತ ಸೈನ್ಯದಳಕ್ಕೆ ಶರಣಾಯಿತು. ಅಂದೇ ಜರ್ಮನಿಯನ್ನು ಎರಡು ಹೋಳಾಗಿ ಕತ್ತರಿಸುವ ಯೋಜನೆಯೂ ಸಿದ್ಧವಾಯಿತು. ರಾಜಧಾನಿ ಬರ್ಲಿನನ್ನು ಒಡೆದು, ನಡುವಿನಲ್ಲಿ ಗೋಡೆಕಟ್ಟಿ ಪೂರ್ವ ಜರ್ಮನಿ ಮತ್ತು ಪಶ್ಚಿಮ ಜರ್ಮನಿ ಎಂದು ವಿಭಜಿಸಲಾಯಿತು. ಪೂರ್ವಜರ್ಮನಿ ರಷ್ಯಾದ ವಶದಲ್ಲುಳಿಯಿತು. ಪಶ್ಚಿಮಜರ್ಮನಿ ಅಮೆರಿಕಾ, ಇಂಗ್ಲೆಂಡಿನ ವಶವರ್ತಿಯಾಯಿತು.

ಜರ್ಮನಿಯ ಭೂಭಾಗ ಎರಡು ಹೋಳಾದರೂ ಅಲ್ಲಿನ ಪ್ರಜೆಗಳ ಹೃದಯ ಚೂರಾಗದೆ ಒಂದೇ ಆಗಿ ಉಳಿದಿತ್ತು. 45 ವರ್ಷಗಳ ಕಾಲದ ಒಂದಾಗುವ ಬಯಕೆ ಎರಡೂ ಭಾಗದ ಜರ್ಮನರನ್ನು ಕಾಡುತ್ತಲೇ ಇತ್ತು. ಪೂರ್ವ ಜರ್ಮನಿಯಿಂದ ಪಶ್ಚಿಮಕ್ಕೆ ಕದ್ದುಮುಚ್ಚಿ ಜನ ಹೋಗುತ್ತಲೇ ಇದ್ದರು. ಈ ಪ್ರಯತ್ನದಲ್ಲಿ ಸಾವಿರಾರು ಜನ ಹುತಾತ್ಮರಾದರೂ, 1989ರಲ್ಲಿ ಲಕ್ಷಾಂತರ ಜನ ಬಂಡೆದ್ದು 'ಬರ್ಲಿನ್' ಗೋಡೆಯನ್ನು ಒಡೆದು ಚೂರು ಮಾಡಿದರು. ಜರ್ಮನರ ಒಗ್ಗೂಡುವ ಬಯಕೆಯನ್ನು ಮೆಟ್ಟಲಾಗದೆ ರಷ್ಯಾ, ಅಮೆರಿಕೆಯು 1990ರ ಅಕ್ಟೋಬರ್ 3 ರಂದು ಎರಡು ಭಾಗಗಳು ಒಗ್ಗೂಡಲು ಸಹಕರಿಸಿದವು. ತುಂಡಾದ ಜರ್ಮನಿ ಅಂದು ಒಂದಾಯಿತು.

ಇದೇ ರೀತಿ ಕೋಟಿ ಕೋಟಿ ಭಾರತೀಯರ ಹೃದಯದಲ್ಲೂ 'ಜ್ಯೂ' ಜನರಂತೆ, ತ್ರಿಖಂಡ ಭಾರತ ಅಖಂಡವಾಗಬೇಕೆಂಬ ಭಾವನೆ ತೀವ್ರಗೊಳ್ಳುವುದೋ, ಎಂದು ಅಖಂಡ ಭಾರತದ ನಮ್ಮ ಕನಸನ್ನು ಮುಂದಿನ ಪೀಳಿಗೆಗಳಿಗೂ ದಾಟಿಸುವೆವೋ, ಪ್ರತಿ ಭಾರತೀಯನೂ ಸ್ವಾತಂತ್ರ್ಯಕ್ಕಾಗಿ ಬಲಿದಾನಮಾಡಿದ ಲಕ್ಷ ಲಕ್ಷ ಹುತಾತ್ಮರ ಕನಸನ್ನು ತನ್ನ ಕನಸೆಂದು ಭಾವಿಸಿ ಅದನ್ನು ಪೂರ್ಣಗೊಳಿಸುವ ಸಂಕಲ್ಪಮಾಡುವನೋ, ಅಂದು ಯೋಗಿ ಅರವಿಂದರ ಭವಿಷ್ಯವಾಣಿ ನಿಜವಾಗುವುದು. ರಾತ್ರಿ ಕಳೆದು ಮರುದಿನ ಸೂರ್ಯೋದಯವಾಗುವುದು ಎಷ್ಟು ನಿಶ್ಚಯವೋ ತುಂಡಾದ ಭಾರತ ಒಂದಾಗವುದು ಅಷ್ಟೇ ನಿಶ್ಚಯ. ●

**ವಿರೋಧ, ವೈಷಮ್ಯ, ವಕ್ರತೆಗಳು ಜೀವನದ ಆಂತರಿಕ ಅರ್ಥವನ್ನು ಹೊರಹೊಮ್ಮಿಸುತ್ತಿವೆ – ಕವೀಂದ್ರ ರವೀಂದ್ರರು**

## ವಿದ್ಯಾರ್ಥಿ ಜ್ಞಾನ ಮಿತ್ರ

# ಭಾರತ ಪರಿಚಯ

ಜೆ. ಎಂ. ಜೋಶಿ
ರಾಜ್ಯ ಕೋಶಾಧ್ಯಕ್ಷರು
ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ



### ದೇಶಬಂಧು ಚಿತ್ತರಂಜನ್‌ದಾಸ್

ಚಿತ್ತರಂಜನ್‌ದಾಸ್ ಅವರು ಭಾರತದ ಪ್ರಮುಖ ರಾಷ್ಟ್ರನಾಯಕರು. ಇವರು ಕಲ್ಕತ್ತಾದ ಉಚ್ಚನ್ಯಾಯಾಲಯದಲ್ಲಿ ಪ್ರಸಿದ್ಧ ವಕೀಲರಾಗಿದ್ದರು. ಪತ್ರಿಕೋದ್ಯಮದಲ್ಲಿ ವಿಶೇಷ ಆಸಕ್ತಿಯನ್ನು ಹೊಂದಿದ್ದರು. ಇವರು ಕವಿ ಮತ್ತು ಪ್ರಬಂಧಕಾರರಾಗಿದ್ದರು. ಅಲ್ಲದೇ ಜನರಿಗೆ ಸ್ವರಾಜ್ಯ ಸಿಗಬೇಕು ಎಂಬುದು ಇವರ ಮುಖ್ಯ ಆಶಯವಾಗಿತ್ತು.

ಚಿತ್ತರಂಜನ್‌ದಾಸರು 1870 ನವೆಂಬರ್ 5 ರಂದು ಜನಿಸಿದರು. ಇವರ ರಾಷ್ಟ್ರೀಯ ಭಾವನೆಗಳಿಗೆ ತಂದೆ ಭುವನ ಮೋಹನದಾಸರು ಸ್ಫೂರ್ತಿಯಾಗಿದ್ದರು. ತಮ್ಮ ಪದವಿ ಶಿಕ್ಷಣದ ನಂತರ ಚಿತ್ತರಂಜನ್‌ದಾಸರು ಕಾನೂನು ಶಿಕ್ಷಣವನ್ನು ಯಶಸ್ವಿಯಾಗಿ ಪೂರೈಸಿದರು. ಅರವಿಂದಘೋಷರು ಬಾಂಬ್ ಮೊಕದ್ದಮೆಯಲ್ಲಿ ಆಪಾದಿತರಾಗಿದ್ದರು. ಅವರ ಪರವಾಗಿ ವಾದ ಮಾಡಿ ಜಯಶಾಲಿಗಳಾದರು. ಇವರ ಕೀರ್ತಿಯೂ ಬೆಳೆಯಿತು. ಕ್ರಿಮಿನಲ್ ಮತ್ತು ಸಿವಿಲ್ ಮೊಕದ್ದಮೆಗಳೆರಡರಲ್ಲೂ ಹೆಸರು ಗಳಿಸಿದರು.

ಚಿತ್ತರಂಜನ್‌ದಾಸರು ಪಾಶ್ಚಾತ್ಯರನ್ನು ಅನುಕರಿಸುತ್ತಿರಲಿಲ್ಲ. ಬಂಗಾಲಿ ಕಾದಂಬರಿಕಾರ ಬಂಕಿಮಚಂದ್ರರು ರಾಜಕೀಯವಾಗಿ ಇವರ ಮೇಲೆ ಪ್ರಭಾವ ಬೀರಿದ್ದರು. ಬಂಗಾಲ ವಿಭಜನೆಯನ್ನು ವಿರೋಧಿಸಿ ಹೋರಾಟ ನಡೆಸಿದರು, ಸ್ವದೇಶಿ ಚಳುವಳಿಯಲ್ಲಿ ಪಾಲ್ಗೊಂಡರು, ಗಾಂಧೀಜಿಯವರ ಅಸಹಕಾರ ಚಳುವಳಿಯನ್ನು ಇವರು ವಿರೋಧಿಸಿದ್ದರು. ರಾಷ್ಟ್ರೀಯ ಕಾಂಗ್ರೆಸ್‌ನ ಅಧ್ಯಕ್ಷ ಪದವಿಗೆ ರಾಜೀನಾಮೆ ನೀಡಿ, ಸ್ವರಾಜ್ಯ ಪಕ್ಷವನ್ನು ಕಟ್ಟಿದರು. ಬಂಗಾಳದಲ್ಲಿ ಚುನಾವಣೆ ನಡೆದಾಗ ವಿಜಯ ಸಾಧಿಸಿದರು. ನಂತರ ಕಾರ್ಪೋರೇಷನ್‌ನಲ್ಲಿ ಸ್ವರಾಜ್ಯ ಪಕ್ಷ ಜಯವನ್ನು ಸಾಧಿಸಿತು. ಚಿತ್ತರಂಜನ್‌ದಾಸರು ಮೇಯರ್ ಆದರು. ದೇಶೀಯ ಭಾಷೆಯ ಮೂಲಕವೇ ರಾಷ್ಟ್ರೀಯ ಶಿಕ್ಷಣ ದೊರೆಯಬೇಕು, ಗೃಹ ಕೈಗಾರಿಕೆಗಳು ಹೆಚ್ಚಾಗಿ ಸ್ಥಾಪಿತವಾಗಬೇಕು ಎಂಬುದು ಇವರ ಚಿಂತನೆಯಾಗಿತ್ತು. ಅದನ್ನು ಸಾಕಾರಗೊಳಿಸಿದರು.

ಚಿತ್ತರಂಜನ್‌ದಾಸರು ತಮ್ಮ ಕಾರ್ಯಗಳಲ್ಲಿ ಎಷ್ಟು ದೃಢಚಿತ್ತರೋ, ದಾನದಲ್ಲೂ ಅಷ್ಟೇ ಉದಾರಿಗಳಾಗಿದ್ದರು. ದೇಶಸೇವೆಗಾಗಿ ತಮ್ಮ ಆಸ್ತಿಯನ್ನೆಲ್ಲಾ ದತ್ತಿಯಾಗಿ ಬಿಟ್ಟುಕೊಟ್ಟರು. ಜನರು ಇವರಿಗೆ ಪ್ರೀತಿಯಿಂದ "ದೇಶಬಂಧು" ಎಂಬ ಬಿರುದನ್ನು ನೀಡಿದರು. ಇವರು 1925ರ ಜೂನ್ 16ರಂದು ಡಾರ್ಜಲಿಂಗ್‌ನಲ್ಲಿ ಸ್ವರ್ಗಸ್ಥರಾದರು. ರಾಷ್ಟ್ರಕಂಡ ಶ್ರೇಷ್ಠ ದೇಶಭಕ್ತ ಹೀಗೆ ಅಮರರಾದರು.

### ಒಂದಿಷ್ಟು ಇತಿಹಾಸ

1. ಕನ್ನಡದ ಮೊದಲ ರಾಜಮನೆತನ ಯಾವುದು?
2. ಕನ್ನಡದ ಮೊದಲ ದೊರೆ ಯಾರು?
3. ಕನ್ನಡನಾಡಿನ ಮೊದಲ ಕೋಟೆಯನ್ನು ತಿಳಿಸಿ.
4. ಕನ್ನಡದ ಮೊದಲ ಜೈನ ರಾಮಾಯಣ ಯಾವುದು?
5. ಕನ್ನಡದ ಪ್ರಥಮ ಐತಿಹಾಸಿಕ ಕಾದಂಬರಿ ಹೆಸರಿಸಿ?

### ಜ್ಞಾನ ವಿಜ್ಞಾನ

1. ಕರ್ನಾಟಕದ ಯಾವ ಜಿಲ್ಲೆಯಲ್ಲಿ "ಗುಡವಿ" ಪಕ್ಷಿಧಾಮವಿದೆ?
2. ಸಾವಿರ ಕಂಬಗಳ ಬಸದಿ ಎಲ್ಲಿದೆ?
3. ಕನ್ನಡನಾಡಿನ ಮೊದಲ ಗಣಿತಜ್ಞ ಯಾರು?
4. ಕನ್ನಡ ನಾಡಿನಲ್ಲಿ ಪ್ರಥಮ ಬಾರಿಗೆ ವಿದ್ಯುತ್ ಉತ್ಪಾದಿಸಿದ್ದು ಎಲ್ಲಿ?
5. ಕರ್ನಾಟಕದಲ್ಲಿ ರೈಲ್ವೆ ಬೋಗಿಗಳನ್ನು ಎಲ್ಲಿ ತಯಾರಿಸಲಾಗುತ್ತಿದೆ?

**ಈ ಪ್ರಶ್ನೆಗಳಿಗೆ ಉತ್ತರಗಳನ್ನು ಓದುಗರು ksst a55@gmail.com ಮೂಲಕ ಕಳುಹಿಸುವುದು. ಸರಿಯಾದ ಉತ್ತರವನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.**

## ಏಪ್ರಿಲ್ ಸಂಚಿಕೆಯ ಉತ್ತರಗಳು

**ಒಂದಿಷ್ಟು ಇತಿಹಾಸ – ಉತ್ತರಗಳು**

1. ಶ್ರೀಕೃಷ್ಣ ದೇವರಾಯ
2. ಹರಪ್ಪ, ಮೊಹೆಂಜೋದಾರೊ
3. ಸ್ವರ್ಣಯುಗ
4. ಡಾ॥ ಬಿ.ಆರ್.ಅಂಬೇಡ್ಕರ್
5. ನಾನಾಸಾಹೇಬ

**ಜ್ಞಾನ–ವಿಜ್ಞಾನ – ಉತ್ತರಗಳು**

1. ನವಿಲು
2. ಡಾ॥ ಕೇಶವ ಬಲಿರಾಮ ಹೆಡ್ಗೇವಾರ್
3. ಶೇ 21
4. 3,84,400 ಕಿ.ಮೀ
5. ಬ್ರಹ್ಮಗುಪ್ತ

# ಯಶಸ್ಸಿನ ಮೂಲ ಮಂತ್ರ




■ ಶ್ರೀಮತಿ ಲಕ್ಷ್ಮೀ ಸಿಂಗ್

ಯಶಸ್ಸು ಯಾರಿಗೂ ಒಮ್ಮಲೇ ಸಿದ್ಧಿಸುವುದಿಲ್ಲ. ನಿರಂತರ ಯತ್ನ ಪ್ರಯತ್ನಗಳಿಂದ ಮಾತ್ರ ಅದನ್ನು ಒಲಿಸಿಕೊಳ್ಳಬಹುದು. ಯಶಸ್ಸನ್ನು ಒಲಿಸಿಕೊಳ್ಳುವುದಕ್ಕೆ ಕೆಲವೊಂದು ಸೂತ್ರಗಳನ್ನು ಅಳವಡಿಸಿಕೊಳ್ಳಬೇಕಾಗಿದೆ. ಉದಾಹರಣೆಗೆ

- ❖ ನಗು, ಮಂದಹಾಸ
- ❖ ಮಾತು, ಚಾಕಚಕ್ಯತೆ
- ❖ ಆತ್ಮವಿಶ್ವಾಸ
- ❖ ಸ್ನೇಹ
- ❖ ಸಕಾರಾತ್ಮಕ ನಡವಳಿಕೆ ಮುಂತಾದವು

**ನಗು, ಮಂದಹಾಸ :** ಸದಾ ನಗುನಗುತ್ತಾ, ನಗಿಸುತ್ತಾ ಇರುವವರು ಯಶಸ್ಸಿನ ಮೊದಲಿನ ಮೆಟ್ಟಿಲನ್ನು ಹತ್ತಿದ ಹಾಗೆಯೇ? ನಗುವುದಕ್ಕೆ, ನಗುತ್ತಾ ಇರುವುದಕ್ಕೆ ಮತ್ತು ನಗಿಸುವುದಕ್ಕೆ ಹಣ ಖರ್ಚು ಮಾಡಬೇಕಾಗಿಲ್ಲ. ಕೇವಲ ಇದರಿಂದ ಆಗುವ ಲಾಭಗಳನ್ನು ಅರಿತು ಮನಸ್ಸನ್ನು ಮುದವಾಗಿ ಇಟ್ಟುಕೊಂಡು ಮಂದಹಾಸ ಬೀರುವುದನ್ನು ಅಭ್ಯಾಸ ಮಾಡಬೇಕು ಅಷ್ಟೆ. ಎಷ್ಟು ಕಷ್ಟ ಕಾರ್ಪಣ್ಯಗಳು ಜೀವನದಲ್ಲಿ ಇದ್ದರೂ ಅದನ್ನು ಮೆಟ್ಟಿನಿಲ್ಲುವುದಕ್ಕೆ ಸಾಧ್ಯವಾಗುತ್ತದೆ.

**ಮಾತು, ಚಾಕಕಕ್ಯತೆ :** ಮಾತು ಒಂದು ಕಲೆ, ಈ ಕಲೆಯನ್ನು ಕರಗತ ಮಾಡಿಕೊಂಡರೆ ಯಶಸ್ಸಿನ ಎರಡನೇ ಮೆಟ್ಟಿಲನ್ನು ಹತ್ತಿದ ಹಾಗೆಯೇ. 'ಮಾತೇ ಮಾಣಿಕ್ಯ' ನಮ್ಮ ವ್ಯಕ್ತಿತ್ವ ಹೊರ ಹೊಮ್ಮುವುದು ನಮ್ಮ ಮಾತಿನ ಶೈಲಿಯಿಂದಲೇ.

ಚಾಕಚಕ್ಯತೆಯ ಮಾತುಗಾರಿಕೆಯಿಂದ ಗೆಲುವನ್ನು ಸುಲಭವಾಗಿ ಸಾಧಿಸಬಹುದು. ಆದರೆ ನಮ್ಮ ಚಾಕಚಕ್ಯತೆಯು ಸಾಧ್ಯ ಮತ್ತು ವಿಶಿಷ್ಟವಾಗಿರಬೇಕು. ನಮ್ಮ ಮಾತು ಇನ್ನೊಬ್ಬರನ್ನು ಆಕರ್ಷಿಸಬೇಕೇ ಹೊರತು ಅವರ ಭಾವನೆಗಳಿಗೆ ಪೆಟ್ಟಾಗಬಾರದು. "ಮಾತು ಆಡಿದರೆ ಹೋಯಿತು ಮುತ್ತು ಒಡೆದರೆ ಹೋಯಿತು" ಎಂಬಂತೆ ನಮ್ಮ ಮಾತಿನಿಂದ ಇನ್ನೊಬ್ಬರಿಗೆ ನೋವಾಗಬಾರದು. ಮಾತಿನ ಚಾತುರ್ಯ, ಸಂದರ್ಭಕ್ಕೆ ತಕ್ಕ ಹಾಗೇ ಇರಬೇಕು. ಮಾತಿನಲ್ಲಿ ಹಾಸ್ಯ, ಜಾಣ್ಮೆ, ಅರ್ಥ ಮತ್ತು ಕಲೆ ಇರುವುಂತೆ ನೋಡಿಕೊಳ್ಳಬೇಕು.

**ಯಶಸ್ಸಿನ ಮೂಲ ಆತ್ಮವಿಶ್ವಾಸ :** ಮನುಷ್ಯನಿಗೆ ಬದುಕುವುದಕ್ಕೆ ಮೂಲಭೂತ ಸೌಕರ್ಯಗಳು ಹೇಗೆ ಮುಖ್ಯವೋ, ಆತ್ಮವಿಶ್ವಾಸ ಕೂಡ ಅಷ್ಟೇ ಅತ್ಯಗತ್ಯ. ಅನುಭವ ಇಲ್ಲದಿದ್ದರೂ ಆತ್ಮವಿಶ್ವಾಸವಿದ್ದರೆ ಏನು ಬೇಕಾದರು ಸಾಧಿಸಬಹುದು. ಮನುಷ್ಯನಿಗೆ ಬದುಕುವುದಕ್ಕೆ ಉಸಿರಾಟ ಎಷ್ಟು ಮುಖ್ಯವೋ ಆತ್ಮವಿಶ್ವಾಸ ಕೂಡ ಅಷ್ಟೇ ಅಣತ್ಯ.

"ಆತ್ಮವಿಶ್ವಾಸಕ್ಕೆ ಆಲೋಚನಾ ಶಕ್ತಿ ಇದ್ದಾಗ ಯಶಸ್ಸು ಕಟ್ಟಿಟ್ಟಬುತ್ತಿ" ದಿನನಿತ್ಯ ಜೀವನದ ಜಂಜಾಟಗಳಿಂದ ಎದುರಾಗುವ ಸಮಸ್ಯೆಗಳಿಗೆ ಆತ್ಮವಿಶ್ವಾಸದಿಂದ ಪರಿಹಾರ ಮಾರ್ಗಗಳನ್ನು ಕಂಡುಕೊಳ್ಳಬಹುದು. ವಿವೇಕ ಇದ್ದರೆ ಸಾಲದು, ಆತ್ಮವಿಶ್ವಾಸದಿಂದ ಕೂಡಿದ ನಿರಂತರ ಪ್ರಯತ್ನ ಅವಶ್ಯಕ.

ಮನುಷ್ಯ ಸಂಘ ಜೀವಿ. ಸಂಬಂಧಗಳನ್ನು ಬೆಳೆಸುವುದಕ್ಕೆ ಸ್ನೇಹದಿಂದ ಮಾತ್ರ ಸಾಧ್ಯ. ಸ್ನೇಹದಿಂದ ಸಂಬಂಧಗಳನ್ನು ಬೆಳೆಸಬಹುದು ಮತ್ತು ಉಳಿಸಬಹುದು. ಆತ್ಮೀಯತೆಯಿಂದ ಎಲ್ಲರ ಮನಸ್ಸನ್ನು ಗೆಲ್ಲಬಹುದು. ಯಶಸ್ಸನ್ನು ಗಳಿಸಬೇಕಾದರೆ ವಿಚಾರ ವಿನಿಮಯ ಅತ್ಯಗತ್ಯ. ವಿಚಾರ, ವಿಷಯಗಳನ್ನು ಹಂಚಿಕೊಳ್ಳುವುದಕ್ಕೆ ಸ್ನೇಹ–ಪ್ರೀತಿ ಇದ್ದರೆ ಮಾತ್ರ ಸಾಧ್ಯ. ಯಾವುದೇ ಕಾರ್ಯ ಮಾಡಬೇಕಾದರು ಜನಮತ, ಜನಬೆಂಬಲ ಮುಖ್ಯವಾಗುತ್ತದೆ. ದ್ವೇಷದಿಂದ ಯಾವುದನ್ನು ಸಾಧಿಸಲು ಸಾಧ್ಯವಾಗುವುದಿಲ್ಲ. ಆದರೆ ಪ್ರೀತಿ, ಸ್ನೇಹ, ಸಂಬಂಧದಿಂದ ಎಂತಹ ಕಠಿಣ ಕೆಲಸವನ್ನಾದರೂ ಸುಲಭವಾಗಿ ಮಾಡಬಹುದು. "ಒಗ್ಗಟ್ಟಿನಲ್ಲಿ ಬಲವಿದೆ" ಎಂಬ ವಾಕ್ಯ ಸ್ನೇಹ ಸಂಬಂಧದಿಂದ ಏನನ್ನೂ ಕೂಡ ಸಾಧಿಸಬಹುದು ಎಂಬುದನ್ನು ಸೂಚಿಸುತ್ತದೆ.

ಸ್ನೇಹದಿಂದ ಯಶಸ್ಸು ಸಿದ್ಧಿಸುತ್ತದೆ.

**ಸಕಾರತ್ಮಕ ನಡವಳಿಕೆ...** ಸಕಾರಾತ್ಮಕ ಎಂದರೆ ಆಶಾಭಾವನೆ. ಎಂತಹ ಕೆಲಸವನ್ನಾದರೂ ಸುಲಭವಾಗಿ ಮಾಡುತ್ತೇನೆ, ಗೆಲ್ಲುತ್ತೇನೆ ಎನ್ನುವ ಛಲ. ನಮ್ಮ ಚಿಂತನೆ ಆಲೋಚನೆ ಸಕಾರಾತ್ಮಕವಾಗಿ ಇದ್ದರೆ ಫಲಿತಾಂಶ ಕೂಡ ಸಕಾರಾತ್ಮಕವಾಗಿ ಕೂಡಿರುತ್ತದೆ. ಎಂತಹ ಪರಿಸ್ಥಿತಿ ಎದುರಾದರೂ ನಾನು ಗೆಲ್ಲಬೇಕು ಎನ್ನುವ ಚಿಂತನೆಯೇ ನಮ್ಮಲ್ಲಿ ಬಲ ಮತ್ತು ಆತ್ಮವಿಶ್ವಾಸ ಉಂಟು ಮಾಡುತ್ತದೆ. ಆತ್ಮವಿಶ್ವಾಸಕ್ಕೆ ಮೂಲ ಸಕಾರಾತ್ಮಕ ನಡವಳಿಕೆ ಆಗಿರುತ್ತದೆ. ನಮ್ಮ ಮನಸ್ಥಿತಿ, ಸಕಾರಾತ್ಮಕವಾಗಿ ಯೋಚಿಸುವ ಸ್ಥಿತಿಯಲ್ಲಿದ್ದರೆ ಎಂತಹ ಪರಿಸ್ಥಿತಿ ಬಂದರೂ ಎದುರಿಸುವ ಮತ್ತು ಗೆಲ್ಲುವ ಛಲ ಹುಟ್ಟುತ್ತದೆ. ಇದರೊಂದಿಗೆ ಆತ್ಮವಿಶ್ವಾಸ ಇದ್ದರಂತೂ ಯಶಸ್ಸು ಕಟ್ಟಿಟ್ಟ ಬುತ್ತಿಯೇ..

ಇದೀಗ ಯಶಸ್ಸನ್ನು ಪಡೆಯಬೇಕಾದರೆ ಹಣ, ಅಂತಸ್ತು ನಮ್ಮ ಸ್ಥಿತಿಗತಿ, ವಿದ್ಯೆ ಮುಂತಾದವುಗಳಿಗಿಂತ ಮಂದಹಾಸದ ನಗು, ಮಾತಿನ ಚಾಕಚಕ್ಯತೆ, ಸ್ನೇಹಪ್ರೀತಿ, ಸಕಾರಾತ್ಮಕ ನಡವಳಿಕೆ ಮುಖ್ಯವಾಗಿ ಆತ್ಮವಿಶ್ವಾಸ ಎಂಬ ಮನೋಬಲ ನಮ್ಮಲ್ಲಿ ಇದ್ದರೆ ಯಶಸ್ಸನ್ನು ಕಾಣುವುದರಲ್ಲಿ ಸಂಶಯವೇ ಇಲ್ಲ.

"ನಮ್ಮ ಯಶಸ್ಸಿಗೆ ನಾವೇ ಕಾರಣರು"

MAG(3)/NPP/23/2020-21 Registered No. RNI 45459/85 Posted at Bangalore PSO Bangalore -560 026
Date of Publishing : 17-05-2022 Date of Posting 20th or 21st of every month Posted at Periodical Rate

# ಶಿಕ್ಷಣ ಸಂಕುಲ





"ವಿದ್ಯೆ ಕಲಿಯಲು ಆಸಕ್ತಿಯುಳ್ಳವರೇ ಕಲಿಸಲು ಯೋಗ್ಯರು" ಶಿಕ್ಷಕರಾದವರು ಪ್ರತಿಕ್ಷಣ ವಿದ್ಯಾರ್ಥಿಗಳಾಗಿರಬೇಕು ಎಂದು ದಿನಾಂಕ 7/8–05–2022ರ ಎರಡು ದಿನಗಳು ಬೆಂಗಳೂರಿನ ಹತ್ತಿರದ ಸುವರ್ಣಮುಖಿ ಆಶ್ರಮದಲ್ಲಿ ಶಿಕ್ಷಣ ಸಂಕುಲದ ಕಡೆಯಿಂದ ನಡೆದ ಶಿಕ್ಷಣ ವಿಕಾಸ ವರ್ಗದಲ್ಲಿ ಶ್ರೀ ಶ್ರೀ ವೀರೇಶಾನಂದ ಸ್ವಾಮಿಯಜಿಯವರು ಹೇಳಿದರು.

ದಿನಾಂಕ: 07–05–2022ರಂದು ಶಿಕ್ಷಣ ಸಂಕುಲದ ಶಿಕ್ಷಣ ವಿಕಾಸ ವರ್ಗವನ್ನು ಉದ್ಘಾಟಿಸುತ್ತಾ ಭಾರತೀಯ ಜ್ಞಾನ ಪರಂಪರೆಯ ಉನ್ನತ ವಿಚಾರಧಾರೆಗಳನ್ನು ತಿಳಿಸಿದರು. ಸರಸ್ವತಿ ಮಾತೆ ಪುಷ್ಪಾರ್ಚನೆಯೊಂದಿಗೆ ವಿಕಾಸ ವರ್ಗ ಪ್ರಾರಂಭವಾಯಿತು. ಜಿ.ಆರ್ ಜಗದೀಶ್‌ರವರು ಶಿಕ್ಷಣ ಕ್ಷೇತ್ರದಲ್ಲಿರುವವರು ತಮ್ಮ ಜ್ಞಾನ ಭಂಡಾರವನ್ನು ಪ್ರತಿದಿನ ಹೆಚ್ಚಿಸುತ್ತಿರಬೇಕು. ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಭಾರತೀಯ ಕೇಂದ್ರಿತ ಶಿಕ್ಷಣಕ್ಕೆ ಒತ್ತು ನೀಡುತ್ತಿರುವುದರಿಂದ ಶಿಕ್ಷಕರು ಭಾರತೀಯ ಶಿಕ್ಷಣದ ಬಗ್ಗೆ ಹೆಚ್ಚು ಜ್ಞಾನ ಹೊಂದಿರಬೇಕೆಂದು ಎಂದು ತಮ್ಮ ಪ್ರಾಸ್ತಾವಿಕ ನುಡಿಯಲ್ಲಿ ತಿಳಿಸಿದರು. ಶಿಕ್ಷಣ ಸಂಕುಲದ ಸಂಚಾಲಕರಾದ ಚಿದಾನಂದ್ ಪಾಟೀಲ್‌ರವರು ವಿಕಾಸ ವರ್ಗದಲ್ಲಿರುವವರನ್ನು ಆತ್ಮೀಯವಾಗಿ ಸ್ವಾಗತಿಸಿದರು.

ಪ್ರಥಮ ದಿನದ ಎರಡನೇ ಗೋಷ್ಠಿಯನ್ನು ಸುವರ್ಣಮುಖಿ ಆಶ್ರಮದ ಸಂಸ್ಥಾಪಕರಾದ ಶ್ರೀ ಡಾ॥ ನಾಗರಾಜ್‌ರವರು ತೆಗೆದುಕೊಂಡು ವಿದೇಶದಲ್ಲಿ ಎಷ್ಟೇ ಹಣವನ್ನು ಸಂಪಾದಿಸುತ್ತಿದ್ದರೂ ಭಾರತಮಾತೆಯ ಒಡಲಲ್ಲಿ ಸಿಗುವ ಆನಂದ ಇನ್ನೆಲ್ಲೂ ಸಿಗಲಾರದು ಎಂಬ ಭಾವನೆಯಿಂದ ನಾನು ವಿದೇಶದಿಂದ ಹಿಂತಿರುಗಿ ಭಾರತ ಮಾತೆಯ ಸೇವೆ ಮಾಡುತ್ತಿದ್ದೇನೆ ಎಂದು ಹೇಳಿದರು. ಭಾರತದಲ್ಲಿ ಭ್ರಷ್ಟಾಚಾರವಿಲ್ಲದಂತಾಗಬೇಕು ಎಂದು ಆಶಿಸಿದರು.

ಎರಡನೇ ಗೋಷ್ಠಿಯ ಅಧ್ಯಕ್ಷತೆಯನ್ನು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಣ ಸಂಘದ ಅಧ್ಯಕ್ಷರಾದ ಸಂದೀಪ್ ಬೂದಿಹಾಳ್‌ರವರು ವಹಿಸಿದ್ದರು.

ಜಗತ್ತಿನ ಸೃಷ್ಟಿಯಾಗಿರುವುದೇ ಭಗವಂತನ ಸೇವೆಗೆಂದು. ಎಲ್ಲವನ್ನು ತ್ಯಜಿಸಿ ಸಂತೋಷವಾಗಿರಿ. ಇದರ ಅರ್ಥ ಎಲ್ಲವನ್ನು ಬಿಡುವುದು ಎಂದರ್ಥವಲ್ಲ. ನಮ್ಮ ಕರ್ಮಫಲಕ್ಕೆ ತಕ್ಕಂತೆ ಎಲ್ಲವನ್ನು ಭಗವಂತ ನೀಡುತ್ತಾನೆ. ಅವಶ್ಯಕತೆ ಇರುವಷ್ಟನ್ನು ಮಾತ್ರ ನಮ್ಮಲ್ಲಿಟ್ಟುಕೊಂಡು ಉಳಿದುದನ್ನು ಸಮಾಜಕ್ಕೆ ಕೊಡಬೇಕೆಂದು ಹೇಳಿದರು.

ಮೂರನೇ ಗೋಷ್ಠಿಯನ್ನು "ಭಾರತೀಯ ವಿಜ್ಞಾನ" ಎಂಬ ಶೀರ್ಷಿಕೆಯಡಿ ಡಾ॥ ರಾಮಚಂದ್ರ ಶೆಟ್ಟಿಯವರು ತೆಗೆದುಕೊಂಡು ಋಗ್ವೇದದಲ್ಲಿಯೇ ವಿಜ್ಞಾನದ ತಳಹದಿಯಿದೆ. ವಿಜ್ಞಾನವೆಂಬುದು ನೂತನ ವಿಚಾರವೇನಲ್ಲ. ಹೊಸವರ್ಷವನ್ನು ಚೈತ್ರ ಮಾಸದಿಂದಲೇ ಪ್ರಾರಂಭ ಮಾಡಬೇಕು. **September septa** ಎಂಬುದು ಹೆಸರಿನಲ್ಲಿ **Septa** ಎಂದರೆ 7, **octo** ಎಂದರೆ ಎಂಟು ಎಂದು ಅರ್ಥ. ಮಾರ್ಚಿನಿಂದ ಲೆಕ್ಕಹಾಕಿದರೆ ಮಾತ್ರ **Sep-7 & Oct 8** ಆಗಲು ಸಾಧ್ಯ. ಆದರೆ ಕ್ಯಾಲೆಂಡರ್‌ನಲ್ಲಿ **September** 9 ನೇ ತಿಂಗಳೆಂದು ಲೆಕ್ಕ ಹಾಕುತ್ತಾರೆ. ಇದೆಲ್ಲಾ ಅವೈಜ್ಞಾನಿಕವೆಂದು. ಶ್ರೀಮತಿ ವಿಜಯಲಕ್ಷ್ಮಿಯವರು ಹೇಳಿದರು. ಇವರು ಈ ಗೋಷ್ಠಿಯ ಅಧ್ಯಕ್ಷತೆಯನ್ನು ವಹಿಸಿದ್ದರು.

ನಾಲ್ಕನೇ ಗೋಷ್ಠಿಯಲ್ಲಿ ಜಿ.ಆರ್.ಜಗದೀಶ್‌ರವರು ಭಾರತೀಯ ಶಿಕ್ಷಣವು ಭಾರತೀಯ ಕೇಂದ್ರಿತವಾಗಿರಬೇಕೆಂದು ತಿಳಿಸಿದರು. ನಮ್ಮನ್ನು ನಾವು ಮರೆತು ಉಳಿದುದೆಲ್ಲವನ್ನು ಗ್ರೇಟ್ ಎನ್ನುವುದು, ಎಲ್ಲವೂ ನನಗೋಸ್ಕರವೇ ಇರುವುದು ಎಂದು ತಿಳಿಸುವುದು ವಿದೇಶಿ ಚಿಂತನೆ. ಶಿಕ್ಷಣವಿರುವಾಗ ವ್ಯವಹಾರಕ್ಕಲ್ಲ, ತ್ಯಾಗದಿಂದಲೇ ಅಮೃತತ್ವ. ಧರ್ಮ, ಅರ್ಥ, ಕಾಮ, ಮೋಕ್ಷದ ಸಾಧನೆ ಪಡೆಯುವುದೇ ಭಾರತೀಯ ಚಿಂತನೆ ಎಂದು ಹೇಳಿದರು.

ಐದನೇ ಗೋಷ್ಠಿಯ ವಿಚಾರ ಸಂಸ್ಕೃತ ವಾಙ್ಮಯದಲ್ಲಿ ವಿಜ್ಞಾನ ಎಂಬುದಾಗಿತ್ತು. ಎರಡನೇ ದಿನದ ಪ್ರಥಮ ಗೋಷ್ಠಿಯನ್ನು ವೇದ ವಿಜ್ಞಾನ ಗುರುಕುಲದ ಪ್ರಧಾನ ಆಚಾರ್ಯರಾದ ಡಾ॥ ಮಹಾಬಲೇಶ್ವರ ಭಟ್‌ರವರು "ಭಾರತೀಯ ಜ್ಞಾನ ಪರಂಪರೆಯಲ್ಲಿ ಭಗವದ್ಗೀತೆ" ವಿಚಾರದ ಮೇಲೆ ತೆಗೆದುಕೊಂಡು ಭಗವದ್ಗೀತೆ ಎಂಬುದು ವಿಶ್ವದ ಎಲ್ಲರಿಗೂ ಜೀವನದ ದಾರಿಯನ್ನು ತೋರಿಸುವ ಮಾರ್ಗದರ್ಶಕ ಎಂದು ಹೇಳಿದರು. ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣ ವೇದಗಳ ಪರಿಚಯ ಮಾಡಿಕೊಟ್ಟರು.

ಕೊನೆಯದಾಗಿ ಶ್ರೀಮತಿ ಸುಜಾತ ದೇವಸೂರು ಇವರು ವಂದೇ ಮಾತರಂ ಹಾಡುವುದರ ಮೂಲಕ ಕಾರ್ಯಕ್ರಮಕ್ಕೆ ಇತಿಶ್ರೀ ಹಾಡಲಾಯಿತು. ಶಿಕ್ಷಣ ವಿಚಾರ ವರ್ಗದಲ್ಲಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ, ಎ.ಬಿ.ವಿ.ಪಿ, ಸಂಸ್ಕೃತಭಾರತಿ, ಜನಸೇವಾ ವಿದ್ಯಾಕೇಂದ್ರ, ಗುರುಕುಲ, ರಾಷ್ಟ್ರೋತ್ಥಾನ, ಸಮಿತಿ ಹೀಗೆ ಅನೇಕ ಸಂಘಟನೆಗಳಿಂದ 50 ಶಿಕ್ಷಕರು ಭಾಗವಹಿಸಿ ವಿಚಾರ ವರ್ಗವನ್ನು ಯಶಸ್ವಿಗೊಳಿಸಿದರು.

IF UNDELIVERED PLEASE RETURN TO SENDER

Printed By :
J. M. Joshi
Karnataka Rajya Madhyamika Shikshaka Sangha ®.)
Published By:
J. M. Joshi
Karnataka Rajya Madhyamika Shikshaka Sangha (R.)
Owned By : J. M. Joshi
on behalf of Karnataka Rajya Madhyamika Shikshaka Sangha (R.)

Printed At: Rashtrotthana Mudranalaya,
'Keshava Shilpa', Kempegowda Nagar, Bengaluru -560 019

Published By : Karnataka Rajya Madhyamika Shikshaka Sangha (R.)
# 55, 'Yadavasmurthi', 1st Main, Sheshadripuram, Bengaluru -560 020

Editor : J. M. Joshi, Karnataka Rajya Madhyamika Shikshaka Sangha (R.), Bengaluru -20

srushtidesigns@gmail.com